ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಸೆಪ್ಟಂಬರ್-೨೦೦೮ ಸಂಚಿಕೆ-೨



ಜನಪದ ವಿಚಾರದಲ್ಲಿ

ಸೆಪ್ಟಂಬರ್-೨೦೦೯

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್ – ೨೦೦೯
ಸಂಪುಟ – ೧೦
ಸಂಚಿಕೆ – ೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಕಳ್ಳಬೆಕ್ಕು ನುಸುಳುತಿದೆ

ಕಳ್ಳಬೆಕ್ಕು ನುಸುಳುತಿದೆ ಹಿಂಬಾಗಿಲಲೆಚ್ಚರ
ಕುಣಿಯುತಿದೆ ಕುಣಿಸುತಿದೆ ಕುಣಿಯದಿರಿ ಎಚ್ಚರ ॥
ಥೈತಕದಿಮಿ ತೋಂತನನ ಥೈತಕದಿಮಿ ತೋಂತನ
ಥೈತಕದಿಮಿ ತೋಂತನನ ಥೈಕದಿಮಿ ತೋಂತನ ॥

ಅಮೆರಿಕದ ಸುಯೆಜ್‌ನವ ಜರ್ಮನಿಯ ಕಂಪೆನಿಯವ
ಥೇಮ್ಸೆಂಬ ಹೆಸರಿನವ ಬೈವಾಟರ್ ಎನ್ನುವವ
ನೀರನ್ನೇ ಮಾರುವವ । ಬಂದಿದ್ದಾನೆ ಎಚ್ಚರ ॥
ಕಳ್ಳಬೆಕ್ಕು...ಹಿಡಿ...ಹಿಡಿ...ಹಿಡಿ....॥ ಕಳ್ಳಬೆಕ್ಕು ॥

ವಿಶ್ವಬ್ಯಾಂಕು ತಾಳವು ಲೋಕಸಭೆ ಮೇಳವು
ಮನಮೋಹನ ರಾಗವು ಧರ್ಮಣ್ಣನ ನಾದವು
ನಮ್ಮ ನೆಲವೆ ರಂಗವು । ಕುಣಿಯದಿರಿ ಎಚ್ಚರ ॥
ಕಳ್ಳಬೆಕ್ಕು...ಹೊಡಿ....ಹೊಡಿ...ಹೊಡಿ...॥ ಕಳ್ಳಬೆಕ್ಕು ॥

ನೀರು ಸರಬರಾಜಿಗೆ ಕಂಪೆನಿಗಳು ಬಂದಿವೆ
ಜಲಮಂಡಳಿ ಸೋತಿದೆ ನಗರಸಭೆ ಮಲಗಿದೆ
ಸಂವಿಧಾನ ಹೇಳಿದೆ । ಜನಕೆ ನೀರ ಹಕ್ಕಿದೆ ॥
ಕಳ್ಳಬೆಕ್ಕು...ಬಡಿ...ಬಡಿ...ಬಡಿ....॥ ಕಳ್ಳಬೆಕ್ಕು ॥

ಖಾಸ್ಗೀಕರಣ ಮಂತ್ರವು ಲೋಟಿಕೋರ ತಂತ್ರವು
ಬಂಡವಾಳ ನಮ್ಮವು ಲಾಭವೆಲ್ಲ ಅವರವು
ನೀರು ಸರಕು ಅಲ್ಲವು । ವ್ಯಾಪಾರ ಸಲ್ಲದು ॥
ಕಳ್ಳಬೆಕ್ಕು...ಗ್ಯಾಟ್...ಗ್ಯಾಟ್ ॥ ಕಳ್ಳಬೆಕ್ಕು ॥

ನಮ್ಮ ನೀರು ನಮ್ಮ ಹಕ್ಕು ನಮ್ಮದೇ ತೀರ್ಮಾನವು
ಗಂಗಮ್ಮ ನಮ್ಮವಳು ಕಾವೇರಿ ನಮ್ಮವಳು
ಅವಳ ಮಾರೋದು ಹೇಗೆ ಇವಳ ಕೊಳ್ಳೋದು ಹೇಗೆ
ಕಳ್ಳಬೆಕ್ಕು...ಹಿಡಿ...ಹೊಡಿ...ಬಡಿ...॥ ಕಳ್ಳಬೆಕ್ಕು ॥

– ಜನಾರ್ದನ ಕೆಸರಗದ್ದೆ

ವಿಚಾರ ದೀಪ್ತಿ

ಕನ್ನಡ ಕಲಿಯಲು ಪ್ರಾರಂಭಿಸಿದಾಗ ನನಗೆ ವಯಸ್ಸು ಮೂವತ್ತೈದು. ಗೆಳೆಯರಿಗೆ ಕನ್ನಡ ಕಲಿಯುವ ವಿಷಯ ತಿಳಿಸಿದಾಗ ಅವರೇನೂ ಪ್ರೋತ್ಸಾಹ ನೀಡಲಿಲ್ಲ. ರಶೀದ ಮಾತ್ರ ಪ್ರೋತ್ಸಾಹ ನೀಡಿದಳು. ಕನ್ನಡ ಕಲಿಯುವಾಗ ನನಗೆ ಸಹಾಯ ಮಾಡಿದ್ದು ಬನ್ನೂರು ರಾಮು, ಕೊಡಗಹಳ್ಳಿ ಮಹದೇವ, ಸೋದರಿ ಗಿರಿಜಾ, ಸಿದ್ದರಾಜು ಮೇಷ್ಟ್ರು- ಅನಂತರ ಕೆಂಪಯ್ಯ ಮೇಷ್ಟ್ರು.

ಕನ್ನಡವನ್ನು ಕಲಿಯಲು ಪ್ರಾರಂಭಿಸಿದ ದಿನಗಳಲ್ಲಿ ಮಧ್ಯರಾತ್ರಿಯವರೆಗೂ ಕಲಿತಿದ್ದೇನೆ.

ಕನ್ನಡ ಸ್ವಲ್ಪಮಟ್ಟಿಗೆ ಕಲಿತ ಬಳಿಕ ಕನ್ನಡದಲ್ಲಿ ಬರೆಯಲು ಸಾಧ್ಯವೇ ಎಂದು ನೋಡಲು ಒಂದಿಷ್ಟು ಹಾಸ್ಯ ಲೇಖನಗಳನ್ನು, ಹಾಗೆಯೇ 'ಮಿಡಲ್'ಗಳನ್ನು ಬರೆದು ಕಳುಹಿಸಿದೆ. ಅವು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದವು. ಆಮೇಲೆ ಕನ್ನಡದಲ್ಲಿ ಕಥೆ ಬರೆಯಲು ಸಾಧ್ಯವೆಂದು ತಿಳಿದುಕೊಳ್ಳಲು 'ಅಸ್ಥಿಪಂಜರ' ಎನ್ನುವ ಕಥೆ ಬರೆದೆ. ಅದು ಮಾಸಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. 'ಅಸ್ಥಿಪಂಜರ' ಪ್ರಕಟವಾದ ಕೂಡಲೇ ಉರ್ದುವಿನಲ್ಲಿ ಬರೆಯಲು ನಿಲ್ಲಿಸಿಬಿಟ್ಟೆ. ಆಮೇಲೆ ನಿರಾತಂಕವಾಗಿ ಕನ್ನಡದಲ್ಲಿ ಬರೆಯಲು ತೊಡಗಿಸಿಕೊಂಡೆ.

ಈ ಮಧ್ಯೆ ನನ್ನ ಕಥೆಯನ್ನು ಆಧರಿಸಿ ಮೆಗಾ ಧಾರಾವಾಹಿ ಸಹ ಬಂತು. 'ನೀನೆಲ್ಲಿರುವೆ?' ಎಂಬ ಧಾರಾವಾಹಿ ನೂರು ಕಂತುಗಳಲ್ಲಿ- ಮೊದಲು ಡಿಡಿ-೧ರಲ್ಲಿ ನಂತರ 'ಚಂದನ'ದಲ್ಲಿ-ಪ್ರಸಾರವಾಯಿತು.

ಧಾರಾವಾಹಿಯಲ್ಲಿ ನನ್ನ ಹೆಸರು ನೋಡಿ ನಮ್ಮೂರಿನವರಲ್ಲದೆ ಸುತ್ತಮುತ್ತ ಹಳ್ಳಿಯವರು ಸಹ ನನ್ನನ್ನು ಗುರುತಿಸುವಂತಾಯಿತು. ಕನ್ನಡಿಗರು ನನಗೆ ತೋರಿಸಿದ ಪ್ರೀತಿಯನ್ನು ಕಂಡು ಕನ್ನಡ ಭಾಷೆ ಕಲಿತದ್ದಕ್ಕೆ ಸಾರ್ಥಕವಾಯಿತೆಂದೆನಿಸಿತು.

ಸಾಹಿತ್ಯ ನನಗೆ ಅನ್ಯಧರ್ಮವನ್ನು ಸಹ ಪ್ರೀತಿಸುವಂತೆ ಮಾಡಿತು. ಸಾಹಿತ್ಯ ನನಗೆ ಸಂತೋಷ ನೀಡಿದೆ. ವಿಶಾಲ ಮನಸ್ಸು ನೀಡಿದೆ. ಒಂದು ವೇಳೆ ನಾನೇನಾದರೂ ಕನ್ನಡ ಸಾಹಿತ್ಯ ಕಲಿಯದೆ ಹೋಗಿದ್ದರೆ ನನ್ನ ವ್ಯಕ್ತಿತ್ವ ವಿಕಾಸವಾಗುತ್ತಿರಲಿಲ್ಲ. ನಾನು ಹೋದ ಕಡೆಯಲ್ಲ ಮಮತೆ, ಪ್ರೀತಿ ಸಿಕ್ಕಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ ನಾನು ಕನ್ನಡ ಕಲಿತು ಐದು ಕೋಟಿ ಕನ್ನಡಿಗರನ್ನು ಸಂಪಾದಿಸಿದ್ದೇನೆ. ಸಾಹಿತ್ಯದಿಂದ ದೇಶ ಭಕ್ತಿ, ಹುಟ್ಟಿದ ನೆಲದ ಬಗ್ಗೆ ಪ್ರೀತಿ, ನಾಡಿನ ಭಾಷೆಯ ಬಗೆಗೆ ಗೌರವ ಇಷ್ಟೆಲ್ಲವನ್ನು ನನಗೆ ಕನ್ನಡ ಸಾಹಿತ್ಯವೇ ಕಲಿಸಿರುವುದು.

- ಆದೀಬ್ ಅಖ್ತರ್

ಕ್ಷಾಮ ಮತ್ತು ಗ್ರಾಮ

- ಸುರೇಂದ್ರ ಕೌಲಗಿ

ಇಂದು ದೇಶದ ಅರ್ಧಭಾಗದಷ್ಟು ಪ್ರದೇಶದಲ್ಲಿ ಕ್ಷಾಮ ಬಿದ್ದಿದೆ. ದೇಶದ ಸುಮಾರು ನೂರು ಕೋಟಿ ಜನ ಕ್ಷಾಮದ ದವಡೆಯಲ್ಲಿ ಸಿಕ್ಕಿಕೊಂಡಿದ್ದಾರೆ. ಮೂರು-ನಾಲ್ಕು ಲಕ್ಷ ಗ್ರಾಮಗಳು ಕ್ಷಾಮದಿಂದ ತತ್ತರಿಸುತ್ತಿವೆ. ದೇಶದಲ್ಲಿ ಕ್ಷಾಮ ಕಾಣಿಸಿಕೊಂಡಾಗ ಅದರ ಪರಿಣಾಮವಾಗಿ ಏನೆಲ್ಲ ಸಾಮಾಜಿಕ, ಆರ್ಥಿಕ ಸಮಸ್ಯೆಗಳು ಉಂಟಾಗಬೇಕೋ ಅವೆಲ್ಲ ಉಂಟಾಗುತ್ತಿವೆ. ವೈರುಧ್ಯವೇನೆಂದರೆ ದೇಶದ ಮುಕ್ಕಾಲು ಭಾಗ ಪ್ರದೇಶಗಳಲ್ಲಿ ಕ್ಷಾಮವಿದ್ದರೆ ಉತ್ತರ ಭಾರತ, ಒರಿಸ್ಸಾ ಮುಂತಾದಡೆಗಳಲ್ಲಿ ಪ್ರವಾಹದ ಹಾವಳಿಯೂ ಉಂಟಾಗಿದೆ. ೨೦೦೯ನೇ ವರ್ಷದಲ್ಲಿ ಕ್ಷಾಮ ಮತ್ತು ಪ್ರವಾಹ ಏಕಕಾಲಕ್ಕೆ ಉಂಟಾಗಿವೆ. ಅತಿವೃಷ್ಟಿ, ಅನಾವೃಷ್ಟಿ ಒಂದೇ ಕಾಲಕ್ಕೆ ಸಂಭವಿಸಿವೆ. ಅನಾವೃಷ್ಟಿಯ ಸಮಸ್ಯೆಗಳನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳು ಒಂದು ತರನಾದರೆ, ಅತಿವೃಷ್ಟಿಯ ಸಮಸ್ಯೆಗಳನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳು ಇನ್ನೊಂದು; ಪೂರ್ತ ಕ್ಷಾಮ ಪ್ರದೇಶದ ಸಮಸ್ಯೆಗಳನ್ನು ಎದುರಿಸಲು ಕೈಗೊಳ್ಳಬೇಕಾದ ಕ್ರಮಗಳು ಇನ್ನೊಂದು ತರ. ಸರ್ಕಾರವೇ ಆಗಲಿ, ಸಮಾಜವೇ ಆಗಲಿ ಏಕಕಾಲಕ್ಕೆ ಮೂರು ವಿಧವಾದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಮತ್ತು ಮೂರು ತೆರನಾದ ಕಾರ್ಯತಂತ್ರವನ್ನು ರೂಪಿಸಬೇಕಾಗಿದೆ. ಕ್ಷಾಮ, ಅತಿವೃಷ್ಟಿ, ಅನಾವೃಷ್ಟಿ ವ್ಯಾಪಕವಾಗಿ ತಲೆದೋರಿವೆ. ಅತಿ ಜನಸಂಖ್ಯಾ ಬಾಹುಳ್ಯದ, ಅತಿ ಭೌಗೋಳಿಕ ವಿಸ್ತಾರದ, ಅತಿ ವೈವಿಧ್ಯತೆಯಿರುವ ಭಾರತದಂಥ ದೇಶದಲ್ಲಿ ಉಂಟಾಗುವ ಆ ಮೂರೂ ಪ್ರಕಾರದ ಸಮಸ್ಯೆಗಳ ಗಾತ್ರ, ತೀವ್ರತೆ ಮತ್ತು ಅಗಾಧತೆ ಭೀಕರವಾಗಿರುತ್ತದೆ. ಅವುಗಳಿಂದ ಉಂಟಾಗುವ ಸಮಸ್ಯೆಗಳು ನಿಯಂತ್ರಣಕ್ಕೆ ಬರಲಾಗದಷ್ಟು ಗಂಭೀರವಾಗಿರುತ್ತವೆ. ಈ ಸಮಸ್ಯೆಗಳ ಗಂಭೀರತೆ ಅಸಾಧಾರಣವಾಗುವುದಕ್ಕೆ ಬಲವಾದ ಕಾರಣವಿದೆ. ಸಮಸ್ಯೆಗಳನ್ನು, ಅವುಗಳ ಪರಿಹಾರವನ್ನು ಅದೇ ಅರ್ಥದಲ್ಲಿ ಅರ್ಥೈಸಿಕೊಂಡು ಪರಿಹಾರ ಕೈಗೊಳ್ಳಲು ಉದ್ಯುಕ್ತವಾದರೆ ಸಮಸ್ಯೆ ಪರಿಹಾರಗೊಳ್ಳಬಹುದೇನೋ. ಆದರೆ ವಾಸ್ತವದಲ್ಲಿ ಹಾಗಾಗುತ್ತಿಲ್ಲ. ಕ್ಷಾಮವನ್ನು ಕ್ಷಾಮ ನಿವಾರಣಾ ಪ್ರಕ್ರಿಯೆಯನ್ನು ರಾಜಕಾರಣದ ಅಳತೆಗೋಲಿನಿಂದಲೇ ಪ್ರಾರಂಭಿಸಲಾಗುತ್ತದೆ. ಕ್ಷಾಮ, ಅತಿವೃಷ್ಟಿ, ಅನಾವೃಷ್ಟಿ ಸಮಸ್ಯೆಗಳ ನಿವಾರಣೆಗಳು ರಾಜಕಾರಣವೆಂಬ ಚದುರಂಗದಾಟದಲ್ಲಿ ಉಪಯೋಗಿಸಲಾಗುವ ಕಾಯಿಗಳಾಗುತ್ತವೆ. ಪ್ರಸಿದ್ಧ ಅಂಕಣಕಾರರಾದ ಪಿ.ಸಾಯಿನಾಥ್ ಹೇಳುವಂತೆ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಗುತ್ತಿಗೆದಾರರು ತಮ್ಮದೇ ಸ್ವಾರ್ಥ ಕಾರಣಕ್ಕಾಗಿ ಕ್ಷಾಮವನ್ನು ಪ್ರೀತಿಸುತ್ತಾರೆ. ತೋರಿಕೆಗೆ ಸ್ಥಿರ ಸರ್ಕಾರವಿರುವಂತೆ ಭಾಸವಾದರೂ ವಾಸ್ತವದಲ್ಲಿ ಅದು ಅಸ್ಥಿರ ಸರ್ಕಾರವಾಗಿರುತ್ತದೆ. ಕ್ಷಾಮವನ್ನು ವಿರೋಧ ಪಕ್ಷಗಳು ತಮ್ಮ ಬಲ ಸಂವರ್ಧನೆಗಾಗಿ ಎಷ್ಟು ಉಪಯೋಗಿಸಬೇಕೋ,

ಎಷ್ಟು ರೀತಿಯಲ್ಲಿ ಉಪಯೋಗಿಸಬೇಕೋ ಅಷ್ಟು ರೀತಿಯಲ್ಲಿ ಅದನ್ನು ಉಪಯೋಗಿಸಿಕೊಳ್ಳುತ್ತವೆ. ಆಗಾಗ್ಗೆ ಉದ್ಭವವಾಗುವ ಅಕಾಲಿಕ ಉಪಚುನಾವಣೆಗಳಲ್ಲಿ ಕ್ಷಾಮ ವಿರೋಧಪಕ್ಷಗಳಿಗೆ ಅನುಕೂಲಸಿಂಧುವಾಗಿ ಒದಗಿಬರುತ್ತವೆ. ಅಧಿಕಾರ ರೂಢ ಪಕ್ಷವು ಸಹ ತನ್ನ ನೆಲೆಯನ್ನು ಭದ್ರಗೊಳಿಸುವುದಕ್ಕಾಗಿ ಕ್ಷಾಮವನ್ನು ಒಳ್ಳೆಯ ಸಾಧನವನ್ನಾಗಿ, ಮಾಂತ್ರಿಕನ ಕೋಲಿನಂತೆ ಉಪಯೋಗಿಸಿಕೊಳ್ಳುತ್ತದೆ. ಅಧಿಕಾರಸ್ಥ ಪಕ್ಷಕ್ಕೂ ವಿರೋಧಪಕ್ಷಗಳಿಗೂ ಕ್ಷಾಮವು ಮುಂದಿನ ಚುನಾವಣೆಯಲ್ಲಿ ಗೆಲುವನ್ನು ಸಾಧಿಸಬೇಕಾದ ಮೆಟ್ಟಿಲಾಗಿರುತ್ತದೆ. ಸರ್ಕಾರ ಕೈಗೊಳ್ಳುವ ಕ್ಷಾಮ ಪರಿಹಾರದ ಪ್ರತಿಯೊಂದು ಕಾರ್ಯಕ್ರಮದಲ್ಲೂ ದೋಷಗಳು ಕಾಣುತ್ತವೆ. ವಿರೋಧಪಕ್ಷಗಳು ತಾವೇ ಸ್ವತಃ ತಮ್ಮ ಸಂಘಟನೆಯ ಬಲದಿಂದ ಒಂದೇ ಒಂದು ಕ್ಷಾಮ ಪರಿಹಾರ ಕೆಲಸವನ್ನು ಕೈಗೊಳ್ಳಲು ಅಸಮರ್ಥವಾಗಿರುತ್ತವೆ. ಪಕ್ಷದ ಪ್ರತಿನಿಧಿಗಳು ಚುನಾವಣೆಗಾಗಿ ಮಾಡಿದ ಖರ್ಚನ್ನು ಆ ಪ್ರತಿನಿಧಿಗಳು ಆಯೋಗದ ಮುಂದೆ ಘೋಷಿಸಿರುವ ಆಸ್ತಿ ವಿವರಗಳನ್ನು ಗಮನಿಸಿದಾಗ ಕೇಂದ್ರ ಸರ್ಕಾರ ಕ್ಷಾಮ ಪರಿಹಾರಕ್ಕೆ ಮಾಡುವ ಖರ್ಚಿನ ಕಾಲುಭಾಗವನ್ನಾದರೂ ವಿರೋಧಪಕ್ಷಗಳು ಖರ್ಚುಮಾಡಿ ಕ್ಷಾಮದ ದವಡೆಯಲ್ಲಿ ಸಿಲುಕಿರುವ ಜನರನ್ನು ಬಿಡುಗಡೆಗೊಳಿಸಬಹುದಿತ್ತು. ಆದರೆ ಇಂಥ ಪ್ರಯೋಗ ದೇಶದ ಯಾವುದೇ ಒಂದು ಸ್ಥಳದಲ್ಲಿ ನಡೆಯುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ಎಲ್ಲಿಯೂ ಸುಳಿವಿಲ್ಲ. ವಿರೋಧಪಕ್ಷಗಳು ಕ್ಷಾಮ ನಿವಾರಣೆಯ ಬಗ್ಗೆಯಾಗಲೀ, ಅದರ ಪ್ರಕೋಪವನ್ನು ಕಡಿಮೆಮಾಡುವುದರ ಬಗ್ಗೆಯಾಗಲೀ ಸ್ವಪ್ರೇರಣೆಯಿಂದ ಯಾವುದೇ ರಚನಾತ್ಮಕ ಕೆಲಸವನ್ನು ಕೈಗೊಳ್ಳದೇ ಇರುವುದರಿಂದ ಅವುಗಳಿಗೆ ಕ್ಷಾಮ ನಿವಾರಣಾ ಪ್ರಕ್ರಿಯೆಯಲ್ಲಿಯ ತೊಡಕುಗಳ ಬಗ್ಗೆ ಲವಲೇಶ ಅನುಭವವೂ ಇಲ್ಲ, ತಿಳುವಳಿಕೆಯೂ ಇಲ್ಲ. ಕ್ಷಾಮ ನಿವಾರಣೆಗೆ ಪಕ್ಷಗಳ ಬಳಿಯಿರುವ ಏಕೈಕ ಪರಿಹಾರ ಸರ್ಕಾರದಿಂದ ಕೋಟಿ ಕೋಟಿ ಮೊತ್ತದ ಅನುದಾನವನ್ನು ಬಿಡುಗಡೆಗೊಳಿಸಿಕೊಳ್ಳಬೇಕು. ಅನುದಾನದ ಮೊತ್ತವನ್ನು ಎಷ್ಟು ದೊಡ್ಡ ಅನುಪಾತದಲ್ಲಿ ಬಿಡುಗಡೆಗೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೋ ಅಷ್ಟು ದೊಡ್ಡ ಅನುಪಾತದಲ್ಲಿ ವಿರೋಧಿ ರಾಜಕೀಯ ಪಕ್ಷಗಳಿಗೆ ಯಶಸ್ಸು ದೊರೆಯಿತೆಂದು, ಅಷ್ಟರ ಮಟ್ಟಿಗೆ ತಾವು ಬಲಿಷ್ಠವಾಗಿ ಬೆಳೆದೆವೆಂದು ಅವು ಭ್ರಮಿಸುತ್ತವೆ. ಇನ್ನು ಕೇಂದ್ರ ಸರ್ಕಾರದ ಬಳಿ ಕ್ಷಾಮನಿವಾರಣೆಗೆ ಮತ್ತು ಅದರ ಬವಣೆಯನ್ನು ಕಡಿಮೆಮಾಡಲು ಇರುವ ಏಕೈಕ ರಾಮಬಾಣ ರಾಜ್ಯಸರ್ಕಾರಗಳ ಮೂಲಕ ಹಣದಹೊಳೆ ಹರಿಸುವುದು. ಆಕಾಶದಿಂದ ಬರಬೇಕಾಗಿರುವ ಮಳೆ ಮತ್ತು ಆ ಮಳೆಯ ಕಾರಣದಿಂದ ಹರಿಯಬೇಕಾದ ನೀರಿನ ಕಡೆ ಕೇಂದ್ರ ಸರ್ಕಾರಕ್ಕಾಗಲೀ, ರಾಜ್ಯ ಸರ್ಕಾರಗಳಿಗಾಗಲೀ ಗಮನವಿಲ್ಲ. ಅವುಗಳಿಗೆ ಗೊತ್ತಿರುವುರು ಹಣದ ಹೊಳೆಯನ್ನು ಹರಿಸುವುದು ಮಾತ್ರ. ಹಣದ ಹೊಳೆ ಹರಿಸುವುದರಿಂದ ಕ್ಷಾಮ ಮತ್ತು ಅದರ ಬವಣೆ ನಿವಾರಣೆಯಾಗುವುದಿಲ್ಲ ಎಂಬ ತಿಳುವಳಿಕೆ ಸರ್ಕಾರಗಳಿಗೆ ಇಲ್ಲ. ಭಾರತ ಸ್ವತಂತ್ರಗೊಂಡ ಮೇಲೆ ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಕ್ಷಾಮ ಬಿದ್ದಿಲ್ಲದೇ ಇಲ್ಲ. ಉತ್ತರ ಭಾರತದಲ್ಲಿ ಹುಚ್ಚು ಪ್ರವಾಹದ ಹಾವಳಿ ಒಂದು ವರ್ಷವೂ ತಪ್ಪಿಲ್ಲ. ಅದೇ ರೀತಿ ಕ್ಷಾಮ ನಿವಾರಣೆಗಾಗಿ, ಪ್ರವಾಹದ ವಿಕೋಪ ತಪ್ಪಿಸುವುದಕ್ಕಾಗಿ,

ಸರ್ಕಾರಗಳು ಹಣ ಖರ್ಚುಮಾಡುವುದೂ ತಪ್ಪಿಲ್ಲ. ಪುನಃ ಅದೇ ರೀತಿ ಕ್ಷಾಮ, ಪುನಃ ಅದೇ ರೀತಿ ಹಣದಹೊಳೆ. ಕ್ಷಾಮ ಪರಿಹಾರಕ್ಕಾಗಿ, ನೆರೆಹಾವಳಿಯ ನಿಯಂತ್ರಣಕ್ಕಾಗಿ ಕಳೆದ ಐವತ್ತು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿರುವ ಖರ್ಚನ್ನು ಗಣನೆಗೆ ತೆಗೆದುಕೊಂಡರೆ ಭಾರತದೇಶದ ಇಡೀ ಭೂಮಿಯನ್ನು ನೂರಾರು ಬಾರಿ ಹಣದ ಹೊದಿಕೆಯಿಂದ ಮುಚ್ಚಬಹುದಾಗಿತ್ತು! ಸರ್ಕಾರ ನೆಪಮಾತ್ರಕ್ಕೆ ಸ್ಥಿರ ಎಂದು ಹೇಳುವುದಕ್ಕೆ ಇನ್ನೊಂದು ಕಾರಣ ಸರ್ಕಾರದ ಸಿಬ್ಬಂದಿಯ ಬೇಜವಾಬ್ದಾರಿತನ ಮತ್ತು ಅವರ ನಿರಂತರ ವರ್ಗಾವಣೆ. ಯಾವ ಅಧಿಕಾರಿಗೂ ತಾನು ನಿರ್ವಹಿಸಬೇಕಾದ ಕೆಲಸದ ಬಗ್ಗೆ ಪೂರ್ಣ ಕಲ್ಪನೆ ಇರುವುದಿಲ್ಲ, ಜನರ ಕಷ್ಟ ನಷ್ಟಗಳ ಬಗ್ಗೆ ಪೂರ್ಣ ತಿಳುವಳಿಕೆ ಇರುವುದಿಲ್ಲ. ಅವರು ಯಾವಾಗಲೂ ತಮ್ಮ ದಂತ ಗೋಪುರದಲ್ಲಿಯೇ ಇರುತ್ತಾರೆ. ಕ್ಷಾಮ ನಿವಾರಣೆ ಎಂದರೆ ಮುಖ್ಯಮಂತ್ರಿಯಿಂದ ಮುಖ್ಯ ಕಾರ್ಯದರ್ಶಿಗೆ ಆದೇಶ, ಮುಖ್ಯ ಕಾರ್ಯದರ್ಶಿಯಿಂದ ಆಯಾ ಇಲಾಖಾ ಕಾರ್ಯದರ್ಶಿಗಳಿಗೆ ಆದೇಶ, ಅವರಿಂದ ಜಿಲ್ಲಾಧಿಕಾರಿಗಳಿಗೆ ಆದೇಶ, ಅವರಿಂದ ವಿಭಾಗಾಧಿಕಾರಿಗಳಿಗೆ, ಅವರಿಂದ ತಹಶೀಲ್ದಾರರಿಗೆ, ಅವರಿಂದ ಆರ್.ಐ.ಗಳಿಗೆ, ಆರ್.ಐ.ಗಳಿಂದ ಗ್ರಾಮಪಂಚಾಯತಿ ಕಾರ್ಯದರ್ಶಿಗಳಿಗೆ, ಅಲ್ಲಿಂದ ಮುಂದೆ ಪಂಚಾಯತಿಯಿಂದ ನಿರ್ಮಿಸಿದ ಮೋರಿಯೊಳಗೆ! ಕರ್ನಾಟಕ ಸರ್ಕಾರ ನಲವತ್ತೆಂಟು ಸಾವಿರ ಕೋಟಿ ಹಣವನ್ನು ಕುಡಿಯುವ ನೀರಿನ ಯೋಜನೆಗೆ ಉಪಯೋಗಿಸದೆ ಹಿಂದಿರುಗಿಸಿದೆ. ಕ್ಷಾಮ ನಿವಾರಣೆ ಬಹು ಯಶಸ್ವಿಯಾಗಿ ನಡೆಯಿತೆಂಬ ವರದಿ ಇದೇ ಪ್ರಕಾರ ಹಂತಹಂತವಾಗಿ ಮೇಲಕ್ಕೇರಿ ಮುಖ್ಯ ಮಂತ್ರಿಯವರ ಮೇಜಿನ ಮೇಲೆ ಪ್ರತಿಷ್ಠಿತ ಸ್ಥಾನ ಪಡೆಯುತ್ತದೆ. ಮುಖ್ಯಮಂತ್ರಿಯಿಂದ ಕೇಂದ್ರದ ಸಂಬಂಧಿಸಿದ ಮಂತ್ರಿಗೆ ಯಶಸ್ಸಿನ ವರದಿ ರವಾನೆ. ಮುಂದೆ ಚಮತ್ಕಾರವೆಂದರೆ ಲೋಕಸಭೆಯಲ್ಲಿ ಸಂಬಂಧಿಸಿದ ಮಂತ್ರಿ ಕ್ಷಾಮ ನಿವಾರಣೆಗೂ, ಬವಣೆಯ ನಿವಾರಣೆಗೂ, ಎಷ್ಟುಕೋಟಿ ಹಣ ಖರ್ಚುಮಾಡಿದೆ ಎಂದು ಹೇಳಿಕೆಕೊಡುತ್ತಾರೆ. ಲೋಕಸಬಾ ಸದಸ್ಯರು, ಆಡಳಿತ ಪಕ್ಷದ ಸದಸ್ಯರು ಮೇಜುಗುದ್ದಿ ಕ್ಷಾಮ ನಿವಾರಣೆಯಾಯಿತೆಂದು ಘೋಷಿಸುತ್ತಾರೆ. ಆದರೆ ಮಾರನೆದಿನದ ಪತ್ರಿಕೆಗಳಲ್ಲಿ ವಿದರ್ಭದಲ್ಲಿ ಐವತ್ತು, ಕರ್ನಾಟಕದಲ್ಲಿ ಇಪ್ಪತ್ತು, ಒರಿಸ್ಸಾದಲ್ಲಿ ಮೂವತ್ತು, ಬಿಹಾರದಲ್ಲಿ ಹತ್ತು, ತಮಿಳುನಾಡಿನಲ್ಲಿ ನಲವತ್ತು ಜನ ರೈತರು ಕ್ಷಾಮದ ಬವಣೆ ತಡೆಯದೆ ಆತ್ಮಹತ್ಯೆ ಮಾಡಿಕೊಂಡರೆಂಬ ಸುದ್ದಿ ಪ್ರಕಟವಾಗಿರುತ್ತದೆ!

ದೇಶದ ಪ್ರಧಾನಮಂತ್ರಿ, ಅರ್ಥಮಂತ್ರಿ, ಗೃಹಮಂತ್ರಿ, ಯೋಜನಾ ಆಯೋಗದ ಉಪಾಧ್ಯಕ್ಷರಾದಿಯಾಗಿ ಕೇಂದ್ರ ಸರ್ಕಾರದ ಎಲ್ಲಾ ಉನ್ನತ ನಾಯಕರು ಮತ್ತು ಹಿರಿಯ ಅಧಿಕಾರಿಗಳು ಗ್ರಾಮದ ನಿಜವಾದ ಜೀವನವನ್ನೇ ಅರಿತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇವರೆಲ್ಲರೂ ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ, ರಾಜ್ಯದ ಮುಖ್ಯಮಂತ್ರಿಗಳಿಗೆ ಉಪದೇಶ ಕೊಡುವಲ್ಲಿ, ಕಡು ಎಚ್ಚರಿಕೆ ಕೊಡುವಲ್ಲಿ ನಿಸ್ಸೀಮರೇ ಹೊರತು ತಾವು ಹಾಕಿಕೊಂಡಿರುವ ನೀತಿ ಎಲ್ಲಿ ದಾರಿತಪ್ಪಿದೆ ಎಂಬ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳಲಾರರು, ಇದಕ್ಕೆ ಅವರಿಗೆ ಬಿಡುವೂ ಇಲ್ಲ. ದಿಲ್ಲಿಗೆ ಹೋಗಿ ಅಲ್ಲಿ ನಾಯಕರಿಂದ ಉಪದೇಶ ಮತ್ತು ಎಚ್ಚರಿಕೆ ಪಡೆದುಕೊಂಡು ಬಂದ ಮುಖ್ಯಮಂತ್ರಿಗಳು

ತಮ್ಮ ರಾಜ್ಯದ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದು ದಿಲ್ಲಿಯಲ್ಲಿ ತಾವು ಅನುಭವಿಸಿದ ಕೋಪವನ್ನು ರಾಜ್ಯದ ಅಧಿಕಾರಿಗಳ ಮೇಲೆ ತೀರಿಸಿಕೊಳ್ಳುತ್ತಾರೆ.

ಮೂಲತಃ ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಯೋಜನೆ ಗ್ರಾಮಗಳಿಗೆ ಸಂಬಂಧಿಸಿದ್ದು. ಈ ಯೋಜನೆ ಪೂರ್ಣತಃ ವಿಫಲವಾಗಿದೆ ಎಂದು ವರದಿಗಳು ಮತ್ತು ಅನುಭವ ಸಾರಿ ಹೇಳುತ್ತದೆ. ಆದರೂ ಕೂಡ ಆ ಯೋಜನೆಯನ್ನು ನಗರಗಳಿಗೂ ವಿಸ್ತರಿಸಲಾಗಿದೆ. ಈ ಯೋಜನೆಯಿಂದ ಆಗಬೇಕಿದ್ದ ಗ್ರಾಮಗಳ ಅಭಿವೃದ್ಧಿ ಮುಖ್ಯವಾಗಿ ಕ್ಷಾಮ ನಿವಾರಣಾ ಅಭಿವೃದ್ಧಿ ಕಾರ್ಯಕ್ರಮಗಳು ಕೈಗೂಡದೇ ಇರುವಾಗ, ಗ್ರಾಮಗಳಲ್ಲಿ ನಿರುದ್ಯೋಗ, ಬಡತನ, ಕಂಗಾಲತನ ಇನ್ನೂ ಮನೆಮಾಡಿರುವಾಗ ಈ ಯೋಜನೆಯನ್ನು ನಗರದತ್ತ ಹೊರಳಿಸಿ ಆ ಯೋಜನೆಯ ಹಣ ಅಲ್ಲಿಯೂ ಪೋಲಾಗುವಂತೆ ಮಾಡಿರುವುದು ಯಾವ ಪುರುಷಾರ್ಥಕ್ಕಾಗಿ? ೨೦೧೨ರ ಹೊತ್ತಿಗೆ ಗ್ರಾಮಗಳ ಜನರು ನಗರಗಳಿಗೆ ವಲಸೆ ಹೋಗಬೇಕೆಂಬ ಪ್ರಧಾನಿಯವರ ಇಂಗಿತ ಎಷ್ಟು ಸಾಧುವಾದದ್ದು. ಒಂದು ಕಡೆಗೆ ಕೃಷಿಯನ್ನು, ಕೃಷಿಕನನ್ನು ಹೊಗಳುತ್ತಾ ಇನ್ನೊಂದು ಕಡೆ ಆ ಎರಡನ್ನೂ ಕೃಷವಾಗಿಸುವ ಕೇಂದ್ರದ ನೀತಿಗೆ ಯಾವ ವೈಜ್ಞಾನಿಕ ಆಧಾರವಿದೆ?

ಇಂದು ದೇಶದಲ್ಲಿ ಕ್ಷಾಮ ಬಿದ್ದಿರುವುದಕ್ಕೆ ಪ್ರಕೃತಿಯ ವಿಕೋಪ ಒಂದು ಕಾರಣ. ಸರ್ಕಾರದ ಸಮಗ್ರ ನೀತಿಯ ತಿರುಗು ಮುರುಗಾಟ ಇನ್ನೊಂದು ಕಾರಣವಾಗಿದೆ. ಸ್ವಾತಂತ್ರ್ಯ ಬಂದ ತರುಣದಲ್ಲಿ ಪಂಚಾಯತ್ ರಾಜ್ಯ, ವಿಕೇಂದ್ರಿಕರಣ, ಸಣ್ಣ ಕೈಗಾರಿಕೆಗಳು, ಕೃಷಿ ಅಭಿವೃದ್ಧಿ, ಅರಣ್ಯ ಅಭಿವೃದ್ಧಿ, ಪ್ರಾದೇಶಿಕ ಭಾಷಾಭಿವೃದ್ಧಿ, ಸಣ್ಣ ನಿರಾವರಿ ಯೋಜನೆಗಳ ಅಭಿವೃದ್ಧಿ ಮುಂತಾದವುಗಳಿಗೆ ಪ್ರಾಶಸ್ತ್ಯ ವಿತ್ತು. ಕ್ರಮೇಣ ಈ ನೀತಿ ನೇಪಥ್ಯಕ್ಕೆ ಸರಿಯಿತು. ಈಗ ಬೃಹತ್ ನಗರಗಳ ಸ್ಥಾಪನೆ, ಕೇಂದ್ರೀಕರಣ, ಬೃಹತ್ ಕೈಗಾರಿಕೆಗಳ ಸ್ಥಾಪನೆ, ಕೃಷಿಯ ತಾತ್ಸಾರ, ಅರಣ್ಯ ನಾಶ, ಇಂಗ್ಲಿಷ್ ಭಾಷಾ ಸಾಮ್ರಜ್ಯದ ವಿಸ್ತರಣೆ ಈ ನೀತಿ ಪ್ರಧಾನವಾಯಿತು. ಮೊನ್ನೆಯವರೆಗೆ ಮೊದಲ ಹಸಿರು ಕ್ರಾಂತಿಯ ಹೊಗಳಿಕೆ ನಡೆದಿತ್ತು. ಹಸಿರುಕ್ರಾಂತಿ ಮಾಡಿದ ಎಲ್ಲ ಅನಾಹುತಗಳ ನಗ್ನ ವಿಶ್ಲೇಷಣೆ ನಡೆದಿತ್ತು. ಆದರೆ ಆಗಸ್ಟ್ ೧೫ರಂದು ಪ್ರಧಾನಿಮಂತ್ರಿಯವರು ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುತ್ತಾ ಈಗ ಪುನಃ ಎರಡನೇ ಹಸಿರುಕ್ರಾಂತಿಯ ಅಗತ್ಯವಿದೆಯೆಂದು ಹೇಳಿದ್ದಾರೆ. ಈಗ ದೇಶದಲ್ಲಿ ಏಕಕಾಲಕ್ಕೆ ಎರಡು ಪ್ರಕಾರದ ಕೃಷಿ ಪದ್ಧತಿಗಳು ಚಲಾವಣೆಯಲ್ಲಿವೆ. ಒಂದು ಸಾವಯವ ಕೃಷಿ ಪದ್ಧತಿ, ಇನ್ನೊಂದು ಹಸಿರು ಕ್ರಾಂತಿಯ ಕೃಷಿ ಪದ್ಧತಿ. ಯಾವ ಪದ್ಧತಿ ಅಗತ್ಯ, ಯಾವುದು ತ್ಯಾಜ್ಯ ಎನ್ನುವುದು ನಿರ್ಧಾರವಾಗದಿದ್ದರೆ ರೈತ ಗೊಂದಲದಲ್ಲಿ ಸಿಕ್ಕಿಹಾಕಿಕೊಂಡಿರುತ್ತಾನೆ, ನಷ್ಟ ಅನುಭವಿಸುತ್ತಿರುತ್ತಾನೆ, ಈಗಾಗಲೇ ನ್ಯಾಷನಲ್ ಸ್ಯಾಂಪಲ್ ಸರ್ವೆ ಸಂಸ್ಥೆ (ಎನ್.ಎಸ್.ಎಸ್.ಒ) ವರದಿ ಮಾಡಿರುವಂತೆ ಈಗಿನ ರೈತರಲ್ಲಿ ಶೇಕಡಾ ನಲವತ್ತರಷ್ಟು ರೈತರು ವ್ಯವಸಾಯದ ಕಾಯಕವನ್ನು ಬಿಡಲು ಸಿದ್ಧರಾಗಿದ್ದಾರೆ. ಇಂದು ಗ್ರಾಮಗಳಲ್ಲಿ ಇದ್ದುಕೊಂಡು ವ್ಯವಸಾಯಮಾಡಲು ಜನ ಸಿಗುತ್ತಿಲ್ಲ. ಅನೇಕ ಹಳ್ಳಿಗಳಲ್ಲಿ ಬಹಳಷ್ಟು ವಿಸ್ತಾರವಾದ ಭೂಮಿ ಪಾಳುಬಿದ್ದಿದೆ. ಇಂದು ದೇಶದ ೬೦ಳ ಜಿಲ್ಲೆಗಳು ಕ್ಷಾಮದ

ನೆರಳಿನಲ್ಲಿವೆ. ಈ ಎಲ್ಲಾ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಅಲ್ಲದೆ ಇಂದಿನ ಅಭಿವೃದ್ಧಿ ನೀತಿಯಿಂದಾಗಿ ಕಟ್ಟಡಗಳ ನಿರ್ಮಾಣ, ರೈಲು ಮಾರ್ಗಗಳ ನಿರ್ಮಾಣ, ರಸ್ತೆಗಳ ನಿರ್ಮಾಣ, ವಿಮಾನ ನಿಲ್ದಾಣಗಳ ನಿರ್ಮಾಣ ಈ ಮುಂತಾದ ಮೂಲಭೂತ ಸೌಕರ್ಯಗಳಿಗಾಗಿ, ಸಮಾಜೋಪಯೋಗಿ ವಿವಿಧ ಕಟ್ಟಡಗಳ ನಿರ್ಮಾಣಕ್ಕಾಗಿ, ವಸತಿ ಹೀನರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವುದಕ್ಕಾಗಿ, ವಿಶ್ವ ವಿದ್ಯಾನಿಲಯಗಳ ಸ್ಥಾಪನೆಗಾಗಿ, ವಿಶೇಷ ಆರ್ಥಿಕವಲಯಗಳ ನಿರ್ಮಾಣಕ್ಕಾಗಿ, ಶಾಲಾಕಾಲೇಜು ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ, ಹೀಗೆ ನೂರಾರು ಬಗೆಯ ಉದ್ದೇಶಗಳಿಗಾಗಿ ಭೂಮಿಯನ್ನು ವಶಪಡಿಸಿಕೊಂಡು ಅದನ್ನು ವ್ಯವಸಾಯೇತರ ಭೂಮಿಯನ್ನಾಗಿ ಮಾಡುವ ಕೆಲಸ ತುಂಬ ಬಿರುಸಾಗಿ ಸಾಗಿದೆ. ಸಮುದ್ರ, ನದಿ ಇತ್ಯಾದಿಗಳಿಂದಾಗುವ ಭೂ ಕೊರೆತಕ್ಕಿಂತ ಮಿಗಿಲಾಗಿ ಭೂಮಿಯ ಮೇಲಿನ ಮಾನವನ ಆಕ್ರಮಣ ವೇಗವಾಗಿ ಸಾಗುತ್ತಿದೆ. ಇದರಿಂದ ದೇಶದ ಒಟ್ಟು ಕೃಷಿ ಭೂಮಿಯ ವಿಸ್ತರಣೆ ದಿನೇ ದಿನೇ ಕಡಿಮೆಯಾಗುತ್ತಿದೆ. ಪರಿಣಾಮವಾಗಿ ಆಹಾರೋತ್ಪದನೆಯೂ ಕಡಿಮೆಯಾಗುತ್ತಿದೆ. ಕಾಡಿನ ನಾಶವಂತೂ ಅವ್ಯಾಹತವಾಗಿ ನಡೆಯುತ್ತಿದೆ. ಈ ಬಗ್ಗೆ ಎಷ್ಟು ಬರೆದರೂ, ಹೇಳಿದರೂ ಕಡಿಮೆಯೇ. ದೇಶದ ಒಟ್ಟು ಭೂ ವಿಸ್ತೀರ್ಣದಲ್ಲಿ ಶೇಕಡಾ ಮೂವತ್ತಕ್ಕೆ ಕಾಡಿನ ವಿಸ್ತೀರ್ಣ ಬಂದಿಳಿದಿದೆ. ಬಹುರಾಷ್ಟ್ರೀಯ ಕಂಪನಿಗಳ ವಾಣಿಜ್ಯ ಬೆಳೆಗಳ ಬೇಡಿಕೆಯಿಂದಾಗಿ ಕಾಡುಗಳು ಶೀಘ್ರಗತಿಯಲ್ಲಿ ನಾಶಹೊಂದುತ್ತಿವೆ. ಕಾಡುಗಳ ನಾಶದ ನೇರ ಪರಿಣಾಮ ಭೂಮಿ ತಾಪದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅಮೆಜಾನ್ ಕಾಡಿನ ಶೀಘ್ರ ನಾಶದ ಪರಿಣಾಮ ಜಾಗತಿಕ ಚಿಂತೆಯಾಗಿದೆ. ಕಾಡನ್ನು ಉಳಿಸಲು ಭೂಮಾಲೀಕರಿಗೆ ಅನುದಾನ ಕೊಡುವ ಯೋಜನೆಯನ್ನು ಪ್ರಾರಂಭಿಸಲು ಯೋಚಿಸಲಾಗುತ್ತಿದೆ.

ಕ್ಷಾಮ ಉಂಟಾಗುವುದಕ್ಕೆ ಅನೇಕ ಕಾರಣಗಳಿರುತ್ತವೆ. ಅವುಗಳಲ್ಲಿ ಪ್ರಕೃತಿ ನಿರ್ಮಿತ ಕಾರಣಗಳಾದರೆ ಇನ್ನು ಅನೇಕ ಮಾನವ ನಿರ್ಮಿತ. ಆದರೆ ದುರ್ದೈವದ ಸಂಗತಿಯೆಂದರೆ ಮಾನವನಿಗೆ ಇನ್ನೂ ತನ್ನ ತಪ್ಪಿನ ಅರಿವು ಉಂಟಾಗದೇ ಇರುವುದು. ಈಗ ಅವನು ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಳ್ಳುತ್ತಿರುವ ಕೆಲಸಗಳು ಯಾವ ರೀತಿ ಇವೆಯೆಂದರೆ "ತಾನು ನಿಂತ ಕೊಂಬೆಯನ್ನು ತಾನೇ ಕಡಿಯುತ್ತಿರುವ" ಮೂರ್ಖನಂತೆ ಇವೆ. ಅಂದರೆ ಈಗ ನಾವು ಎದುರಿಸುತ್ತಿರುವ ಕ್ಷಾಮ, ಪ್ರವಾಹ, ಹವಾಮಾನದ ತಾಪದಲ್ಲಿ ಹೆಚ್ಚಳ, ಹಂದಿಜ್ವರ, ಹಣದುಬ್ಬರದ ಏರಿಳಿಕೆಯ ಹುಚ್ಚಾಟ, ಆರ್ಥಿಕ ಹಿಂಜರಿತ, ನಕ್ಸಲೀಯರು ಮತ್ತು ಮಾವೋವಾದಿಗಳ ಅಟ್ಟಹಾಸ, ನಾಗರಿಕತೆಯ ಹೆಸರಿನಲ್ಲಿ ಅನಾಗರಿಕತೆಯ ಮೆರವಣಿಗೆ ಇತ್ಯಾದಿಗಳೆಲ್ಲದಕ್ಕೆ ಮುಖ್ಯ ಕಾರಣ ಗ್ರಾಮಗಳ ನಾಶವೀಕರಣ. ಜಗತ್ತಿನ ಯಾವುದೇ ದೇಶ ತೆಗೆದುಕೊಂಡರೂ ಆ ದೇಶ ಪ್ರಧಾನವಾಗಿ ಗ್ರಾಮ ಬಾಹುಳ್ಯ ದೇಶವಾಗಿಯೇ ಇರುವುದು ಕಂಡುಬರುತ್ತದೆ. ಈ ಮಾತಿಗೆ ಅಮೇರಿಕಾ, ಜಪಾನ್, ಇಂಗ್ಲೆಂಡ್, ರಷ್ಯಾದಂಥ ಮುಂದುವರೆದ ರಾಷ್ಟ್ರಗಳೂ ಹೊರತಾಗಿಲ್ಲ. ಆದರೆ ಆ ಮುಂದುವರೆದ ರಾಷ್ಟ್ರಗಳೇ ಆಧುನಿಕ ಜಗತ್ತಿನ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿವೆ. ಗ್ರಾಮ ಸಂಸ್ಕೃತಿಯನ್ನು ಹಾಳುಮಾಡಿದ್ದೇ

ಮಾನವಕುಲದ ವಿನಾಶಕ್ಕೆ ಕಾರಣವಾಗುತ್ತಿದೆ. ಗ್ರಾಮಗಳು ಭದ್ರವಾಗಿದ್ದರೆ ಜನಪದ ಸಂಪತ್ತೆಲ್ಲವೂ ಭದ್ರವಾಗಿರುತ್ತದೆ. ದೇಶದ ಅರ್ಧಭಾಗ ಕ್ಷಾಮದ ಕರಾಳ ನೆರಳಿಗೆ ಒಳಗಾಗಿರುವಾಗ, ಅರ್ಧಭಾಗದಷ್ಟು ಜನಸಂಖ್ಯೆ ಆಹಾರ ಅಭಾವದಿಂದ ನರಳುತ್ತಿರುವಾಗ, ಪದಾರ್ಥಗಳ ಬೆಲೆ ಗಗನಕ್ಕೇರುತ್ತಿರುವಾಗ, ಸಂಕಷ್ಟದ ಪರಿಸ್ಥಿತಿಯನ್ನು ಲಾಭಕೋರರು ದುರುಪಯೋಗಪಡಿಸಿಕೊಳ್ಳುತ್ತಿರುವಾಗ ದೇಶ ತನ್ನ ಆರು ಲಕ್ಷ ಗ್ರಾಮಗಳ ಪುನುರುತ್ಥಾನದ ಬಗ್ಗೆ ಆಲೋಚಿಸುವುದು ತೀವ್ರ ಅಗತ್ಯವಾಗಿದೆ.

ಈಗ ಅನೇಕ ಯುವಕರು ನಗರ ಜೀವನದಿಂದ ಬೇಸತ್ತು ಗ್ರಾಮಗಳಿಗೆ ಹಿಂದಿರುಗುತ್ತಿದ್ದಾರೆ. ಸಾವಯವ ಕೃಷಿಯನ್ನು ಪ್ರಾರಂಭಿಸಿದ್ದಾರೆ. ನಗರಗಳಲ್ಲಿರುವ ಅನೇಕರಿಗೆ ತಮ್ಮ ನಗರಗಳು ಯದ್ವಾತದ್ವಾ ಬೆಳೆಯುತ್ತಿರುವ ಬಗ್ಗೆ, ಅಲ್ಲಿ ತಮ್ಮತನ, ತಮ್ಮ ವ್ಯಕ್ತಿತ್ವ, ತಮ್ಮ ಮುಖ ಕಣ್ಮರೆಯಾಗುತ್ತಿರುವ ಬಗ್ಗೆ ತೀವ್ರ ಅಸಮಾಧಾನಗೊಳ್ಳುತ್ತಿದ್ದಾರೆ. ಹಿಂದೆ ಗಾಂಧೀಜಿಯವರು "ಹಳ್ಳಿಗಳಿಗೆ ಹಿಂತಿರುಗಿ" ಎಂದು ಕರೆಕೊಟ್ಟಿದ್ದರು. ಆ ಕರೆಗೆ ಈಗ ಅಲ್ಲಲ್ಲಿ ಸ್ಪಂದನ ಉಂಟಾಗುತ್ತಿದೆ. ಅನೇಕರು ದೇಸೀ ಸಂಸ್ಕೃತಿಯ ಉಳಿಯುವಿಕೆಯ ಅಗತ್ಯದ ಮಾತನ್ನು ಎತ್ತಿದ್ದಾರೆ; ಜನಪದ ಸಾಹಿತ್ಯ, ಕಲೆ ಮುಂತಾದವುಗಳ ರಕ್ಷಣೆಯ ಅಗತ್ಯದ ಧ್ವನಿ ಕೇಳಿಬರುತ್ತಿದೆ; ಇಂಗ್ಲಿಷ್ ಹೊರತಾಗಿಯೂ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ಅಗತ್ಯದ ಕೂಗು ಗಟ್ಟಿಯಾಗುತ್ತಿದೆ; ತಾವೇ ಬೆಳಸಿಕೊಂಡ ಆಧುನಿಕ ಜೀವನಶೈಲಿಗೆ ತಾವೇ ಬೇಸರಿಸಿಕೊಂಡ ಅಭಿಪ್ರಾಯಗಳು ಗಟ್ಟಿಯಾಗುತ್ತಿವೆ.

ಯಂತ್ರ ನಾಗರಿಕತೆ ಅನೈತಿಕವಾದದ್ದು ಎಂಬ ಪಾಪ ಪ್ರಜ್ಞೆ ಎಲ್ಲರನ್ನೂ ಕಾಡುತ್ತಿದೆ. ಇವೆಲ್ಲ ಒಳ್ಳೆಯ ಬೆಳವಣಿಗೆಗಳು. ಗ್ರಾಮಗಳನ್ನು ಪುನಃ ಕಟ್ಟಬೇಕೆಂಬ ಸಂಜ್ಞೆಗಳು. ಭಯಾನಕ ಶಸ್ತ್ರಾಸ್ತ್ರಗಳೇ ಯುದ್ಧವಿರೋಧಕ್ಕೆ ಕಾರಣವಾಗುತ್ತಿದೆ. ತೋರಿಕೆಗೆ ಯುದ್ಧದ ಮಾತನಾಡಿದರೂ ಆಂತರ್ಯದಲ್ಲಿ ಯಾವ ದೇಶವೂ ಯುದ್ಧ ಪ್ರಾರಂಭಿಸಲು ಸಿದ್ಧವಿಲ್ಲ. ಮಾನವೀಯ ಮೌಲ್ಯಗಳಿಗೆ ಹೆಚ್ಚು ಹೆಚ್ಚು ಗಮನಕೊಡಲಾಗುತ್ತಿದೆ. ಸ್ಮಾಲ್ ಈಸ್ ಬ್ಯೂಟಿಫುಲ್, ಸ್ಮಾಲ್ ಈಸ್ ಪಾಸಿಬಲ್ ಎಂಬಿತ್ಯಾದಿ ವಿಚಾರಗಳು ಹೊಸ ಪೀಳಿಗೆಯ ಯುವಕರಲ್ಲಿ ಮೂಡುತ್ತಿವೆ. ಇದೆಲ್ಲ ಸಾಧ್ಯವಾಗಬೇಕಾದರೆ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಮೂಲ ಸಾಧನವಾದ ಗ್ರಾಮಗಳ ಪುನರ್‌ನಿರ್ಮಾಣ. ಆಹಾರ, ವಸತಿ, ಉದ್ಯೋಗ, ಶಿಕ್ಷಣ, ಬಟ್ಟೆ, ಆರೋಗ್ಯ, ಪರಿಸರ ರಕ್ಷಣೆ ಅಭಿವೃದ್ಧಿ ಯೋಜನೆ ಇತ್ಯಾದಿಗಳಿಗೆಲ್ಲ ಗ್ರಾಮವನ್ನೇ ಒಂದು ಘಟಕವನ್ನಾಗಿ ಪರಿಗಣಿಸಬೇಕು. ಅಲ್ಲಿ ಜಾಗತಿಕ ಚಿಂತನೆ, ಸ್ಥಾನಿಕ ಕ್ರಿಯೆ ಜೀವನ ವಿಧಾನವಾಗಬೇಕು. ಗ್ರಾಮಗಳಲ್ಲಿ ರಾಜಕೀಯ ಪಕ್ಷಗಳಿಗೆ ಪ್ರವೇಶವಿರಬಾರದು. ನೂತನ ಜಗತ್ತಿಗನುಗುಣವಾದ ನೂತನ ಗ್ರಾಮಗಳ ಸೃಷ್ಟಿಯಾಗಬೇಕು. ಇಲ್ಲವಾದರೆ ಕ್ಷಾಮಗಳ ಸರಮಾಲೆಯನ್ನೇ ಧರಿಸಬೇಕಾಗುತ್ತದೆ. ಇದು ಸತ್ಯ ಇದು ನಿತ್ಯ.

* * *

ಮೃತ್ಯು ಮಹಾನಿದ್ರೆ, ಭಯಬೇಕಿಲ್ಲ !

– *ವಿನೋಬಾ*

ಮೃತಿ – ಸ್ಮೃತಿಃ ಶುದ್ಧಯೆ

ಮೃತಿ – ಸ್ಮೃತಿಃ ಶುದ್ಧಯೆ (೩೭) – ಮರಣದ ಸ್ಮೃತಿ ಚಿತ್ತಶುದ್ಧಿಗಾಗಿ ಬಹಳ ಉಪಯೋಗ ಆಗುವುದು. ಆದ್ದರಿಂದ ಮೃತ್ಯುವಿನ ನಿರಂತರ ಸ್ಮರಣೆ ಇರಬೇಕು. ನಾವು ಮೃತ್ಯುವಿನ ಸ್ಮರಣೆಯಿಂದ ದೂರ ಇರಲು ಪ್ರಯತ್ನಿಸುತ್ತೇವೆ, ಇದು ತಪ್ಪು. ಮೃತ್ಯು ಜೀವನದ ಒಂದು ವಸ್ತು ಸ್ಥಿತಿ ಮತ್ತು ಲಾಭದಾಯಕವೂ ಆಗಿರುವುದು. ನಾವೇನು ಹುಟ್ಟಿದೆವು, ಅದಕ್ಕೆ ಮೊದಲು ಅವ್ಯಕ್ತದಲ್ಲಿ ನಮ್ಮ ದೀರ್ಘ ಜೀವನ ನಡೆದಿತ್ತು. ಈ ಜೀವನವಾದರೋ ಮಧ್ಯದಲ್ಲಿನ ಒಂದು ಚಿಕ್ಕ ಮುಕ್ಕಾಮು. ಅದರ ಹಿಂದೆ–ಮುಂದೆ ದೀರ್ಘ ಕಾಲವೊಂದಿರುವುದು. ನಮ್ಮ ಈ ಜೀವನದಲ್ಲಿ ನಾವು ಇನ್ನಾರ ಚಿತ್ತಕ್ಕೂ ದುಃಖ ಕೊಡಲಿಲ್ಲ ಅನ್ನುವಷ್ಟು ಮಾತ್ರವಾದರೂ ನಾವು ಸಾಧಿಸಬೇಕು. ಪೂರ್ವಜರು ಇದಕ್ಕೇ ಅಹಿಂಸೆ ಎಂದು ಹೆಸರಿಟ್ಟಿರುವರು. ಯಾರೊಬ್ಬರನ್ನೂ ಕೊಲ್ಲದಿರುವುದಷ್ಟೇ ಅಹಿಂಸೆಯಲ್ಲ. ಅಹಿಂಸೆ ಅಂದರೆ ಯಾರೊಬ್ಬರ ಚಿತ್ತಕ್ಕೂ ದುಃಖ ಕೊಡದಿರುವುದು. ಜನರು ದಾನ–ಧರ್ಮ ಮಾಡುವರು, ಅದು ಗೌಣವಸ್ತು. ಯಾರ ಚಿತ್ತಕ್ಕೂ ದುಃಖ ಕೊಡದಿರುವುದು ಮುಖ್ಯ ವಸ್ತು. ಮೃತ್ಯುವಿನ ಸ್ಮರಣೆ ನಮಗೆ ಇರುವುದಾದರೆ ಈ ಬಗ್ಗೆ ನಮ್ಮ ಚಿತ್ತದಲ್ಲಿ ಜಾಗೃತಿ ಇರುವುದು.

ಎರಡನೆಯ ಮಾತು, ಮೃತ್ಯವಿನ ಸ್ಮರಣೆ ಇರುವುದಾದರೆ ನಮ್ಮ ಚಿತ್ತ ಪ್ರಸನ್ನ ಇರುವುದು. ನಾವು ಈ ಜಗತ್ತನಲ್ಲಿರುವುದು ಸ್ವಲ್ಪ ದಿನ ಮಾತ್ರ. ಅಷ್ಟು ದಿನ ಎಲ್ಲರೊಡನೆ ಪ್ರೇಮಮಯ ಸಂಬಂಧ ಇಟ್ಟುಕೊಳ್ಳುವ ಪ್ರಯತ್ನ ಮಾಡಬೇಕು. ಅದರಿಂದ ಆತ್ಮದ ಅಮರತ್ವದ ಕಲ್ಪನೆ ಬರುವುದು. ಮಾನವ ಶರೀರ ಧಾರಣೆ ಮಾಡುವುದು ಮತ್ತು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳದೇ ಸಾಯುವುದು ಅಂದರೆ ಮಾನವ–ಜೀವನದ ಪೂರ್ಣ ದುರುಪಯೋಗ ಮಾಡಿಕೊಂಡಂತೆ. ಆದ್ದರಿಂದ ನಿರಂತರ ಮೃತ್ಯವಿನ ಸ್ಮರಣೆ ಇರುವುದದಾದರೆ ಆಗ ಬ್ರಹ್ಮವಿದ್ಯೆಯ ಭಾಸ ಇರುವುದು. ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಅದು ಮಾಡಿಕೊಂಡೇ ನಾವು ಈ ದೇಹ ಬಿಡಬೇಕು.

ಮೂರನೆಯ ಮಾತು, ಅದಕ್ಕಾಗಿ ನಮಗೆ ನಿತ್ಯವೂ ಸಾಧನೆ ಮಾಡಬೇಕಾಗುವುದು. ಯಾವ ಸಾಧನೆ? ಅದಕ್ಕೆ ನಾನು ಮೃತ್ಯವಿನ ಪೂರ್ವಪ್ರಯೋಗ ಎಂದು ಹೆಸರಿಟ್ಟಿರುವೆ. ನಾಟಕ ಏನು ಆಡುವರು, ಆ ನಾಟಕ ಅತಿ ಉತ್ತಮ ಆಗಬೇಕು ಎಂದು ಅದರ ಪೂರ್ವಪ್ರಯೋಗ, (ರಿರ್ಹಸಲ್) ಮಾಡಿಕೊಳ್ಳುವರು. ಅದೇ ಪ್ರಕಾರ ನಮ್ಮ ಮೃತ್ಯು ಉತ್ತಮ ರೀತಿಯಿಂದ ಆಗಬೇಕು ಅನ್ನುವುದಾದರೆ ನಾವು ಮೃತ್ಯವಿನ ಪೂರ್ವಪ್ರಯೋಗ ಮಾಡಬೇಕು. ಭಗವದ್ಗೀತೆಯ ಎಂಟನೆಯ ಅಧ್ಯಾಯದಲ್ಲಿ, ಮೃತ್ಯುವಿನ ಸಮಯದಲ್ಲಿ ಯಾವ ಭಾವನೆ ಇರುವುದೋ ಅದರಂತೆ ಮುಂದಿನ

ಜನ್ಮ ಸಿಗುವುದು ಎಂದು ತಿಳಿಸಲಾಗಿದೆ ಮತ್ತು ಪೂರ್ತಿ ಜೀವನದಲ್ಲಿ ನಮ್ಮ ಭಾವನೆ ಯಾವ ರೀತಿ ಇರುವುದೋ ಆ ಪ್ರಕಾರ ನಮ್ಮ ಮೃತ್ಯುವಿನ ಸಮಯದಲ್ಲಿ ಇರುವುದು. ಮೃತ್ಯುವಿನ ಸಮಯದಲ್ಲಿ ನಾವು ಯಾವ ಭಾವನೆಯನ್ನು ಇಚ್ಛೆ ಮಾಡುವೆವೋ ಅದೇ ಪ್ರಕಾರ ನಮ್ಮ ಪೂರ್ತಿ ಜೀವನದಲ್ಲಿ ಇಟ್ಟುಕೊಳ್ಳಬೇಕಾಗುವುದು. ಅದರ ಅಭ್ಯಾಸ ಮಾಡಬೇಕಾಗುವುದು. ಮೃತ್ಯುವಿನ ಸಮಯದಲ್ಲಿ ಪರಮಾತ್ಮನ ಸ್ಮರಣೆ ಆಗಬೇಕು ಎಂಬ ಭಾವನೆ ನಮಗೆ ಇರುವುದಾದರೆ ನಮ್ಮ ನಿತ್ಯದ ಮೃತ್ಯುವಿನ ಸಮಯದಲ್ಲಿ ಅಂದರೆ ರಾತ್ರಿ ಮಲಗುವಾಗ ಪರಮಾತ್ಮನ ಸ್ಮರಣೆ ನಾವು ಮಾಡಬೇಕಾಗುವುದು. ನಿದ್ರೆ ಮೃತ್ಯುವಿನ ಪೂರ್ವಪ್ರಯೋಗ ಆಗಿರುವುದು. ರಾತ್ರಿ ನಾವು ಮಲಗುವಾಗ ನಾವು ಸಾಯುತ್ತಿದ್ದೇವೆ, ಪರಮಾತ್ಮನ ಮಡಿಲಲ್ಲಿ ಹೋಗುತ್ತಿದ್ದೇವೆ ಎಂಬ ಭಾವನೆಯಿಂದ ನಾವು ನಿದ್ದೆ ಮಾಡಬೇಕು. ನಿತ್ಯವೂ ನಾವು ಪರಮಾತ್ಮನ ಸ್ಮರಣೆಯೊಂದಿಗೆ ಸಾಯುವ, ಮಲಗುವ ಅಭ್ಯಾಸ ಮಾಡುವುದಾದರೆ ಮೃತ್ಯುವಿನ ಸಮಯದಲ್ಲಿ ನಮಗೆ ಪರಮಾತ್ಮನ ಸ್ಮರಣೆ ಆಗುವುದು. ಮೃತ್ಯುವಿನ ಸಮಯದಲ್ಲಿ ಹರಿಸ್ಮರಣೆ ಇಚ್ಛಿಸುವುದಾದರೆ ಹರಿಸ್ಮರಣೆಯೊಂದಿಗೆ ನಿತ್ಯವೂ ಸಾಯುವ (ಮಲಗುವ) ಅಭ್ಯಾಸ ನಾವು ಮಾಡಬೇಕಾಗುವುದು. ಮೃತ್ಯು ಯಾವ ಕ್ಷಣದಲ್ಲಿ ಬರುವುದು ಅನ್ನುವುದು ನಮ್ಮ ಕೈನಲ್ಲಿಲ್ಲ. ಆದರೆ ಹರಿಸ್ಮರಣೆಯೊಂದಿಗೆ ಸಾಯುವ ಅಭ್ಯಾಸ ಮಾಡುವುದು ನಮ್ಮ ಕೈಯಲ್ಲಿನ ಮಾತು.

ಗೀತೆಯ ಎಂಟನೆಯ ಅಧ್ಯಾಯದಲ್ಲಿ ಉತ್ತಮ ಮೃತ್ಯು ಬರಲು ಏನು ಹೇಳಲಾಗಿದೆ ಅದನ್ನು ನಿತ್ಯ ಮಲಗುವಾಗ ಪೂರ್ವಪ್ರಯೊಗ ಮಾಡಬೇಕು. ಮೃತ್ಯು ದೀರ್ಘ ನಿದ್ರೆ, ನಿತ್ಯ ನಾವು ಮಲಗುವುದು ಚಿಕ್ಕ ನಿದ್ರೆ. ಮಲಗುವಾಗ ಎಲ್ಲಾ ವೃತ್ತಿಗಳನ್ನು ಒಳಗೆ ಎಳೆದುಕೊಳ್ಳಬೇಕು. ದಿನವೆಲ್ಲಾ ನಾವೇನು ಮಾಡಿದೆವು ಅದನ್ನು ನೆನಪು ಮಾಡಿಕೊಳ್ಳುತ್ತಿದ್ದರೆ, ಅದರ ಬಗ್ಗೆ ಚಿಂತೆ ಮಾಡುತ್ತಿದ್ದರೆ ಅದು ಸರಿಯಾಗದು. ಚಿಂತಾಮಗ್ನರಾಗಿ ಮಲಗುವುದು ಸರಿಯಲ್ಲ. ಅದರಿಂದ ನಿದ್ದೆ ಚೆನ್ನಾಗಿ ಬರುವುದಿಲ್ಲ. ಚಿಂತೆ ಬಿಟ್ಟು ಎಲ್ಲ ಬಿಟ್ಟು ಮಲಗಬೇಕು. ಈ ಪ್ರಕಾರ ನಿತ್ಯವೂ ರಾತ್ರಿ ಚಿಂತಾಮುಕ್ತರಾಗಿ ಮಲಗುವ ಪೂರ್ವಪ್ರಯೋಗ ಮಾಡುವುದಾದರೆ ಆ ಪೂರ್ವಪ್ರಯೋಗ ಅಂತ್ಯಕಾಲದಲ್ಲಿ ಕೆಲಸಕ್ಕೆ ಬರುವುದು. ಆದ್ದರಿಂದ ನಿತ್ಯದ ನಿದ್ದೆಗೆ 'ಮೃತ್ಯುವಿನ ಪೂರ್ವಪ್ರಯೋಗ' ಎಂದು ಹೆಸರಿಟ್ಟಿರುವೆ.

ಮೃತ್ಯುವಿನ ನೋಟೀಸ್ (ಪೂರ್ವಸೂಚನೆ) ಸಿಗುವುದಿಲ್ಲ. ಆದ್ದರಿಂದ ಮೃತ್ಯುವಿಗಾಗಿ ಯಾವಾಗಲೂ ತಯಾರಿರಬೇಕು. ಇದರ ಅಭ್ಯಾಸಕ್ಕಾಗಿ ಸಂಜೆಯ ಪ್ರಾರ್ಥನೆಯ ನಂತರ ಮೌನ ಆವಶ್ಯಕ. ಸಂಜೆಯವರೆಗೆ ನಾವು ಕೆಲಸಕಾರ್ಯಗಳ ಆವೇಗದಲ್ಲಿರುವೆವು. ಪ್ರಾರ್ಥನೆಯ ಸಮಯದಲ್ಲಿ ಆ ಆವೇಗವನ್ನು ತಡೆಯಲೇಬೇಕು. ಅದರ ಸಲುವಾಗಿ ನಾವು ಅಭ್ಯಾಸ ಮಾಡಬೇಕಾಗುವುದು. ಕಾರ್ಯಕರ್ತರು, ಕಾರ್ಯಕರ್ತರಲ್ಲದೆ ಇರುವ ಇತರರು, ಆರೋಗ್ಯವಂತರು, ಕಾಯಿಲೆ ಇರುವವರು, ಚಿಕ್ಕವರು–ದೊಡ್ಡವರು ಎಲ್ಲರಿಗೂ ಪ್ರಾರ್ಥನೆಯ ಅತ್ಯಂತ ಕಮ್ಮಿ ಉಪಯೋಗದ ವಸ್ತು ಏನು ಅಂದರೆ ಆ ಸಮಯದಲ್ಲಿ ನಾವು ದುಃಖ–ವ್ಯಥೆ– ಕರ್ಮ ಇದೆಲ್ಲದರಿಂದ ದೂರ ಆಗಬೇಕು. ನಿತ್ಯವೂ ಈ ರೀತಿ ದೂರ ಆಗುವುದರ ಅಭ್ಯಾಸ ಅಂದರೆ ಮೃತ್ಯುವಿನ

ಅಭ್ಯಾಸ. ಪ್ರಾರ್ಥನೆಯ ನಂತರ ಮೌನವಿರುವುದೂ ಇದೇ ಉದ್ದೇಶ್ಯ. ನಮಗೆ ಮನಸ್ಸಿನಲ್ಲಿ ಬಹಳ ಇಚ್ಛೆ ಇದೆ. ಆದರೆ ಪ್ರಾರ್ಥನೆ ಆಗಿಬಿಟ್ಟಿತು. ಮೌನದ ಘಂಟೆ ಬಾರಿಸಿಬಿಟ್ಟಿತು ಅಂದರೆ ಮಾತನಾಡುವ ವೇಗವನ್ನು ತಡೆಯುವ ಅಭ್ಯಾಸ ಆಗುವುದು. ಈ ತರಹದ ಅಭ್ಯಾಸ ನಾವು ಮಾಡಬೇಕು. ಈಜುವವನು ಯಾವ ರೀತಿಯಲ್ಲಿ ನದಿಯ ಅಲೆಗಳಿಂದ ಬಿಡಿಸಿಕೊಂಡು, ಅದರಿಂದ ಬೇರೆಯಾಗಿ ಈಜುತ್ತಾನೆಯೋ ಹಾಗೆಯೆ ನಮ್ಮ ವೇಗ, ದುಃಖ, ಕರ್ಮಗಳನ್ನು ದೂರಮಾಡಿ ಅದರಿಂದ ಭಿನ್ನರಾಗುವುದಾದರೆ ಬಾಳಿನಲ್ಲಿ ಈಜು ಕಲಿತಂತೆ. ಅವನು ಭವಸಾಗರವನ್ನು ಈಜಬಲ್ಲನು.ಇದರದೇ ಅಭ್ಯಾಸ ಪ್ರಾರ್ಥನೆಯ ನಂತರ ಮೌನದಿಂದ ಆಗುವುದು.

ನಮ್ಮ ಮೃತ್ಯು ವಿಶೇಷ ಪ್ರಕಾರದಿಂದ ಆಗಬೇಕೆಂದು ನಾವು ಇಚ್ಛಿಸುವೆವು. ಮೃತ್ಯುವಿನ ಸಮಯದಲ್ಲಿ ಚಿತ್ತದಲ್ಲಿ ಶಾಂತಿ ಇರುವುದಾದರೆ ಮೃತ್ಯುವಿನ ಸಮಯದಲ್ಲಿ ಬಹಳ ಹೆಚ್ಚು ಮಹತ್ವದ ವಸ್ತುವನ್ನು ನಾವು ಪ್ರಾಪ್ತಮಾಡಿಕೊಂಡೆವು ಎನ್ನಬಹುದು. ಆದ್ದರಿಂದ ಮೃತ್ಯುವಿನ ಸಮಯದಲ್ಲಿ ನಾವು ಯಾವ ಭಾವನೆಯನ್ನು ಇಚ್ಛಿಸುವೆವೋ ಅಂತಹ ಭಾವನೆಯನ್ನು ಮೌನದ ಸಮಯದಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಜೀವನದಲ್ಲಿ ಬದುಕಿರುವಾಗಲೇ ಕಮ್ಮಿ-ಕಮ್ಮಿ ಅಂದರೂ ಮೃತ್ಯುವಿನ ಅನಭವದ ಅಭ್ಯಾಸವಂತೂ ನಾವು ಮಾಡಲೇಬಹುದು. ನಿತ್ಯದ ನಿದ್ದೆಯನ್ನು ಮೃತ್ಯುವಿನ ಪೂರ್ವಪ್ರಯೋಗ ಎಂದು ತಿಳಿದು ಅದರ ಅಭ್ಯಾಸ ಮಾಡಬೇಕು. ರಾತ್ರಿಯ ಪ್ರಾರ್ಥನೆಯ ನಂತರ ದಿನದಲ್ಲಿನ ಯಾವ ಕೆಲಸವೂ ಬಾಕಿ ಇರುವುದಿಲ್ಲ. ಆದ್ದರಿಂದ ಪ್ರಾರ್ಥನೆಯ ನಂತರ ಕೃತಕೃತ್ಯ ಭಾವನೆಯಿಂದ ಭಗವಂತನ ಮಡಿಲಲ್ಲಿ ನಿದ್ದೆ ಮಾಡಬೇಕು. ಮತ್ತೆ ಅವನು ಇಚ್ಛೆ ಪಟ್ಟರೆ ಮತ್ತೊಂದು ದಿನ ಜೀವಸಲು ಕೊಡುವನು- ಮಾರನೆದಿನ ಎಬ್ಬಿಸುವನು. ಹಾಗೆ ಇಚ್ಛೆ ಇಲ್ಲ ಅಂದರೆ ಪುನಃ ಎಬ್ಬಿಸುವುದೇ ಇಲ್ಲ. ನಾವು ನಮ್ಮ ಕಡೆಯಿಂದ ಮಲಗುವಾಗ ಆ ದಿನದ ಕರ್ತವ್ಯವನ್ನು ಮುಗಿಸಿ ಭಗವಂತನ ಮಡಿಲಲ್ಲಿ ನಿದ್ದೆ ಮಾಡಬೇಕು.

ಮೃತ್ಯುವಿನ ವಿಷಯದಲ್ಲಿ ಭಗವದ್ಗೀತೆಯಲ್ಲಿ ಮೂರು ಮಾತನ್ನು ತಿಳಿಸಲಾಗಿದೆ:

೧. ಮೃತ್ಯುವಿನ ನಿರಂತರ ಸ್ಮರಣೆ ಇರಬೇಕು- ಜನ್ಮ-ಮೃತ್ಯು-ಜರಾ-ವ್ಯಾಧಿ-ದುಃಖ ಇವುಗಳ ದೋಷ (ಚಿತ್ತದ ಮಲ)ದ ಬಗ್ಗೆ ನಿರಂತರ ವಿಚಾರ ಮಾಡುವುದು. (೧೩.೮)

೨. ಬುದ್ಧಿಯಲ್ಲಿ ಮರಣ-ಮೀಮಾಂಸೆ ಮಾಡಿ ನಿಃಶಂಕ ಭಾವನೆ ಮಾಡಿಕೊಳ್ಳುವುದು.

೩. ನಿತ್ಯವೂ ರಾತ್ರಿ ಮಲಗುವ ಮೊದಲು ಮೃತ್ಯುವಿನ ಅಭ್ಯಾಸ ಮಾಡುವುದು.

ಜನ ಮೃತ್ಯುವಿನಿಂದ ಭಯಪಡುವರು. ವಾಸ್ತವವಾಗಿ ಮೃತ್ಯು ಅಂದರೆ ನಿದ್ರೆ. ನಿದ್ರೆ ಹೇಗೆ ದಿನವೆಲ್ಲ ಮಾಡುವ ಪರಿಶ್ರಮದ ಅಂತ್ಯ ಆಗಿರುವುದೋ ಅದರಂತೆಯೇ ಮೃತ್ಯು ಮಹಾನಿದ್ರೆ ಆಗಿರುವುದು. ಅದು ಜೀವನದ ತುಂಬ ಮಾಡಿದ ಪರಿಶ್ರಮದ ಅಂತ್ಯ. ಅದು ಮಹಾನಿದ್ರೆ. ಅದರಿಂದ ಭಯಪಡುವ ಕಾರಣವೇ ಇಲ್ಲ.

* * *

ಜನಪದ ಧ್ವನಿ

ಶ್ರೀ ರಾಮಕೃಷ್ಣ ಪರಮಹಂಸರು ಯಾವಾಗಲೂ "ದೇವಿಯ ಧ್ಯಾನ ಮಾಡಿದೆ. ದೇವಿ ಪ್ರತ್ಯಕ್ಷಳಾದಳು. ದೇವಿಯೊಂದಿಗೆ ಮಾತನಾಡಿದೆ" ಎಂದು ಹೇಳುತ್ತಿದ್ದರು. ನರೇಂದ್ರನಾಥರು ಸ್ವಾಮಿ ತಾವು ಅಮ್ಮನೊಂದಿಗೆ ಮಾತನಾಡಿದಾಗ ನನ್ನ ಕಷ್ಟಗಳನ್ನು ಪರಿಹರಿಸುವಂತೆ ಕೇಳಿಕೊಳ್ಳಿ ಎಂದರು. ಪರಮಹಂಸರು ಆಗಲಿ ಎಂದರು. ಮಾರನೆ ದಿನ ವಿಚಾರಿಸಿದಾಗ ಅಯ್ಯೋ ನಾನು ಮರೆತುಬಿಟ್ಟೆ ಎಂದರು. ಇದೇ ರೀತಿ ಐದಾರುಸಲ ಪ್ರತಿದಿನವೂ ಮರೆತುಬಿಟ್ಟೆ ಎನ್ನುತ್ತಾರೆ. ಇದರಿಂದ ಇಬ್ಬರಿಗೂ ಬೇಸರವಾಗಿ ಪರಮಹಂಸರು ಅಯ್ಯಾ ನೀನು ದಿನವೂ ಹೇಳುತ್ತೀಯೆ ನಾನು ದಿನವೂ ಮರೆತುಬಿಡುತ್ತೇನೆ. ಆದುದರಿಂದ ನೀನೇ ಧ್ಯಾನ ಮಾಡು. ನಿನಗೇ ಪ್ರತ್ಯಕ್ಷಳಾಗುತ್ತಾಳೆ. ನೀನೆ ಕೇಳಿಬಿಡು ಎಂದರು. ಅದೇ ಸರಿ ಎಂದು ನರೇಂದ್ರರು ಧ್ಯಾನಾರೂಢರಾಗುತ್ತಾರೆ. ಧ್ಯಾನ ಮುಗಿದ ನಂತರ ಪರಮಹಂಸರು ನಿನ್ನ ಕಷ್ಟಗಳ ನಿವಾರಣೆಯನ್ನು ಅಮ್ಮನೊಂದಿಗೆ ಕೇಳಿಕೊಂಡೆಯಾ ಎಂದರು. ನರೇಂದ್ರರು ಇಲ್ಲ ಸ್ವಾಮಿ ಕೇಳಲಿಲ್ಲ ಎಂದರು. ಪರಮಹಂಸರು ಆಶ್ಚರ್ಯದಿಂದ ನನಗೆ ದಿನವೂ ಹೇಳುತ್ತಿದ್ದೆ. ನೀನೇ ಮಾತನಾಡಿದಾಗ ಕೇಳಲಿಲ್ಲ ಏಕಪ್ಪ ಹೀಗೆ ಎಂದರು. ನರೇಂದ್ರರು ಸ್ವಾಮಿ ಇಡೀ ವಿಶ್ವವನ್ನು ಸೃಷ್ಟಿಸಿದ ಮಹಾತಾಯಿ ಎದುರಿಗೆ ಬಂದಾಗ ನನ್ನ ಕಷ್ಟಗಳೆಂಬ ಅಲ್ಪವಿಷಯವನ್ನು ಹೇಳಿಕೊಳ್ಳಲು ನನಗೆ ನಾಚಿಕೆಯಾಯಿತು ಎಂದರು. ಪರಮಹಂಸರು ನನಗೆ ಸಹ ಇದೇ ಆಯಿತಪ್ಪ ಎಂದರು. ಆ ನರೇಂದ್ರರೇ ವಿಶ್ವ ವಿಖ್ಯಾತರಾದ ಸ್ವಾಮಿ ವಿವೇಕಾನಂದರು. ಭಕ್ತಿಯ ಪರಕಾಷ್ಠೆಯನ್ನು ತಲುಪಿದ ನಮ್ಮ ದಾಸ ಶ್ರೇಷ್ಠರು ಭಗವಂತನನ್ನು ಕುರಿತು ನೀನ್ಯಾಕೋ ನಿನ್ನ ಹಂಗ್ಯಾಕೋ ಎಂದರು. ಭಗವಂತ ನಿನಗೇನು ಬೇಕು ಎಂದರೆ ನೀನೇ ನಮ್ಮೊಳಗಿದ್ದೀಯ ನಾನೇನು ಕೇಳಲಿ ಎಂದರು. ನಿಜವಾದ ಭಕ್ತನು ಭಕ್ತಿ ಜ್ಞಾನ ವೈರಾಗ್ಯಗಳನ್ನಲ್ಲದೆ ಬೇರೇನೂ ಕೇಳುವುದಿಲ್ಲ.

ಭಗವಂತ ನಮ್ಮ ಕೈಗೆ ಸಿಕ್ಕಿದರೆ ಭದ್ರವಾಗಿ ಹಿಡಿದುಕೊಂಡು ನಮ್ಮ ನೆಗಡಿ, ಕೆಮ್ಮು ನಿವಾರಣೆಯಿಂದ ಹಿಡಿದು ನಾವು ಕಂಡಿರುವ ಕೇಳಿರುವ ಊಹಿಸಬಹುದಾದ ಸಕಲ ಸೌಭಾಗ್ಯಗಳನ್ನೂ ನಮಗೆ ನಮ್ಮ ಮಕ್ಕಳಿಗೆ ಮೊಮ್ಮಕ್ಕಳಿಗೆ ಮರಿಮಕ್ಕಳಿಗೆ ಎಲ್ಲವನ್ನು ಕೊಡು ಕೊಡು ಎಂದು ಪೀಡಿಸುತ್ತೇವೆ. ಭಗವಂತನೊಂದಿಗೆ ವ್ಯಾಪಾರಕ್ಕೆ ಇಳಿಯುತ್ತೇವೆ. ನಾನು ಕೇಳಿದ್ದೆಲ್ಲ ಕೊಡು. ನಿನಗೆ ವಿಶೇಷ ಪೂಜೆ, ಉತ್ಸವ ಮಾಡಿಸುತ್ತೇನೆ. ಬೆಳ್ಳಿ ಅಥವ ಚಿನ್ನದ ರಥ ಮಾಡಿಸುತ್ತೇನೆ. ನಿನ್ನ ಹುಂಡಿಗೆ ಕಾಣಿಕೆ ಹಾಕುತ್ತೇನೆ. ಆಭರಣಗಳನ್ನು ಮಾಡಿಸುತ್ತೇನೆ ಎನ್ನುತ್ತೇವೆ. ನಾನು ಕೇಳಿದ್ದೆಲ್ಲವನ್ನು ಕೊಡು, ಕೊಡು ಎಂದು ಹಿಂಸೆ ಮಾಡುತ್ತೇವೆ. ಭಗವಂತ ನಮ್ಮ ಕೈಗೆ ಸಿಗದೆ ಇರುವುದರಿಂದ ಎಲ್ಲೋ ಒಂದುಕಡೆ ಸುರಕ್ಷಿತವಾಗಿದ್ದಾನೆ.

– ಎ. ವೆಂಕಟರಮಣಶೆಟ್ಟಿ, ಮೈಸೂರು

* * *

ಹಿಂದ್ ಸ್ವರಾಜ್ ಬಗ್ಗೆ ಯೋಚಿಸುತ್ತಾ...

– *ಕೆ.ಪಿ.ಸುರೇಶ್*

ಗಾಂಧೀ ಹಿಂದ್ ಸ್ವರಾಜ್ ಬರೆದ ಕಾಲದಲ್ಲಿ ಪಶ್ಚಿಮದಲ್ಲಿ ಘಟಿಸಿದ ಮೂರು ನಾಲ್ಕು ವೈಜ್ಞಾನಿಕ, ತಾಂತ್ರಿಕ ಆವಿಷ್ಕಾರಗಳು ಪಶ್ಚಿಮದ ಆಧುನಿಕ ನಾಗರಿಕತೆಯ ಮೇಲೆ ಬೀರಿದ ಆತ್ಯಂತಿಕ ಪರಿಣಾಮಗಳನ್ನು ಗಮನಿಸಿದರೆ, ಗಾಂಧಿಯ ದೃಷ್ಟಾರತ್ವವೂ, ಹಿಂದ್ ಸ್ವರಾಜ್ ಕೃತಿಯ ಪ್ರಸ್ತುತತೆಯೂ ಸ್ಫುಟವಾಗಿ ಗೋಚರಿಸುತ್ತದೆ.

ಎಡಿಸನ್ನನ ವಿದ್ಯುಚ್ಛಕ್ತಿ, ಫೋರ್ಡನ ಕಾರು ಮತ್ತ ಐನ್‌ಸ್ಟೈನನ ಸಾಪೇಕ್ಷ ಸಿದ್ಧಾಂತ ಇತ್ಯಾದಿಗಳನ್ನು ಬದಲಾವಣೆಯ ರೂಪಕಗಳೆಂದು ಬಗೆಯಬಹುದು. ಇದರೊಂದಿಗೇ, ವೈಜ್ಞಾನಿಕ ತಾರ್ಕಿಕ, ಭೌತಿಕ ಅಳತೆಗೋಲುಗಳಿಂದ ಮನುಷ್ಯನ ಐಹಿಕ ವ್ಯಾಪಾರವನ್ನೂ, ಪ್ರಕೃತಿಯ ನಿಗೂಢಗಳನ್ನೂ ಅರ್ಥೈಸಿಕೊಳ್ಳುವ ಹುಮ್ಮಸ್ಸು ಬಂತು. ಮಾನದಂಡದ ಕಲ್ಪನೆ ಜಾಗತಿಕವಾಯಿತು. ತಿನ್ನುವ ಪ್ರಮಾಣ ಹೆಚ್ಚಿದರೆ, ಅದು ಅಭಿವೃದ್ಧಿಯ ಗುರುತು ಎಂಬ ವ್ಯಾಖ್ಯೆ ಕೂಡಾ ಜಾಗತಿಕವಾಯಿತು.

ಯುರೋಪಿಗೆ ಇದು ಸಾಧ್ಯವಾದದ್ದು, ವಸಾಹತುಗಳ ಸಂಪನ್ಮೂಲಗಳನ್ನು ದೋಚಿದ್ದರಿಂದ. ಈ ಅರಿವು ಆಧುನಿಕ ಪಾಶ್ಚಾತ್ಯ ನಾಗರಿಕತೆಗೆ ಎಂದೂ ಬರಲಿಲ್ಲ..! ಆದ್ದರಿಂದಲೇ, 'ಗುರಿ ಮತ್ತು ಸಾಧನ'ಗಳ ನೈತಿಕ ಬಿರುಕು ಈ ನಾಗರಿಕತೆಯ ಸ್ಥಾಯೀ ಲಕ್ಷಣವಾಯಿತೇನೋ.

ಈ ನಾಗರಿಕತೆಯನ್ನು, ಬಂಡವಾಳಶಾಹಿ ಎಂದು ಭಾವಿಸಿದ ಮಾರ್ಕ್ಸಿಸಂನಿಂದ ಒಂದಷ್ಟು ಅನುಕೂಲಗಳಾದರೂ, ಅಭಿವೃದ್ಧಿಯ ಮಾನದಂಡ ಮತ್ತು ಸಂಪನ್ಮೂಲಗಳ ಬಳಕೆ ಬಗ್ಗೆ ಮಾರ್ಕ್ಸಿಸಂ ಕೂಡಾ ಭಿನ್ನ ಕಲ್ಪನೆ ಹೊಂದಿರಲಿಲ್ಲ. ಸ್ವಾತಂತ್ರ್ಯ ಪಡೆದ ವಸಾಹತುಗಳೂ ಇದೇ ಪಾಶ್ಚಿಮಾತ್ಯ ಮಾನದಂಡಗಳನ್ನು, ವಿಧೇಯವಾಗಿ ಒಪ್ಪಿಕೊಂಡಿದ್ದು, ನಮ್ಮ ಕಾಲದ ಚಾರಿತ್ರಿಕ ದುರಂತಗಳಲ್ಲೊಂದು.

ವ್ಯಕ್ತಿ ಸ್ವಾತಂತ್ರ್ಯ ಈ ನಾಗರಿಕತೆಯ ಪ್ರಮುಖ ಚಾಲಕ ಶಕ್ತಿ ಎಂದು ಬಿಂಬಿಸಿದರೂ, ಪ್ರಭುತ್ವ ಮತ್ತು ವ್ಯಾಪಾರೀ ಹಿತಾಸಕ್ತಿಗಳ ಶಕ್ತಿ ವರ್ಧನೆಯು, ಈ ನಾಗರಿಕತೆಯ ಉತ್ಪನ್ನಗಳೇ.

೨೧ನೇ ಶತಮಾನದ ವೇಳೆಗೆ, ಈ ನಾಗರಿಕತೆಯ ಕೊಡುಗೆಯಾಗಿ ನಮಗೆ ಕಾಣಿಸುತ್ತಿರುವುದು– ವ್ಯಕ್ತಿ ಸ್ವಾಯತ್ತತೆಯ ಹರಣ, ಸಂಪನ್ಮೂಲಗಳ ಅಸಮಾನ ಹಂಚಿಕೆ, ಮತ್ತು ಪರಿಸರ ಮಾಲಿನ್ಯ ಮಾತ್ರ.

ವ್ಯಕ್ತಿ ಸ್ವಾತಂತ್ರ್ಯ ಮತ್ತು ವಿಕಾಸಶೀಲತೆ ಹಾಗೂ ಸುಖಸೌಲಭ್ಯಕ್ಕೆ ತಾಂತ್ರಿಕ ಆವಿಷ್ಕಾರಗಳು ಎಂಬ ಪಾಶ್ಚಾತ್ಯ ನಾಗರಿಕತೆಯ ಎರಡು ಮಾನಸ್ತಂಭಗಳನ್ನೂ ಮಿಥ್ಯೆ ಗಾಂಧಿ ಎಂದು ಸಿದ್ಧಪಡಿಸುತ್ತಾರೆ.

ಪರಿಪೂರ್ಣತೆಯತ್ತ ವಿಕಾಸ ಎಂಬ ತಾತ್ವಿಕ ನೆಲೆಗಟ್ಟಿನ ಸಾಮಾಜಿಕ, ರಾಜಕೀಯ ಸಂರಚನೆಗಳ ಮೂಲಕ ಯುರೋಪು ಸಾಧಿಸಿದ್ದಾದರೂ ಏನು ಎಂದು ಗಾಂಧಿ ಪ್ರಶ್ನಿಸುತ್ತಾರೆ. ಹಾಗೇ, ಆಧುನಿಕ ತಾಂತ್ರಿಕ ಆವಿಷ್ಕಾರಗಳು ಮನುಷ್ಯನನ್ನು ಲೋಲುಪನನ್ನಾಗಿಸುತ್ತದೆ. ಪ್ರಕೃತಿಯನ್ನು ನಿಯಂತ್ರಿಸುವ ಹಪಾಹಪಿ ಅದು ಎಂದು ಗಾಂಧಿ ಭಾವಿಸುತ್ತಾರೆ. ವ್ಯಕ್ತಿಗತ ಅನ್ವೇಷಕ ಪ್ರವೃತ್ತಿ ಲೋಭವನ್ನೂ, ಜ್ಞಾನದ ಬಚ್ಚಿಡುವಿಕೆಯನ್ನು ಹೆಚ್ಚಿಸುತ್ತದೆ. ಆದ್ದರಿಂದಲೇ ಗಾಂಧಿ ಆಧುನಿಕ ತಂತ್ರಜ್ಞಾನದ ಬಗ್ಗೆ ನಿಷ್ಠುರ ಧೋರಣೆ ತಾಳುತ್ತಾರೆ. ಈ ಅನ್ವೇಷಕ ಪ್ರವೃತ್ತಿಗೆ ಎದುರಾಗಿ ಗಾಂಧಿ ನೀಡುವ ಉದಾಹರಣೆ, ನೇಗಿಲು..! ಸಾವಿರಾರು ವರ್ಷಗಳಿಂದ ನಮ್ಮ ನೇಗಿಲು ಹಾಗೇ ಇದೆ. ಇಂಪ್ರೂವ್ ಮಾಡುವ ಬುದ್ಧಿಮತ್ತೆ ಇರಲಿಲ್ಲವೆಂದಲ್ಲ. ಅದರ ಅಗತ್ಯವಿಲ್ಲ ಎಂಬ ವಿವೇಕ ಇಲ್ಲಿ ಕೆಲಸ ಮಾಡಿದೆ ಎಂದು ಗಾಂಧಿ ಭಾವಿಸುತ್ತಾರೆ.

ಪೇಟೆಂಟ್ ಕಾನೂನು ಯುರೋಪಿನಲ್ಲಿ ಶತಮಾನಗಳಿಂದ ಇದೆ. ಮತ್ತು ನಮ್ಮಲ್ಲಿ ಆ ಪರಿಕಲ್ಪನೆ ಇರಲೇ ಇಲ್ಲ ಎಂಬುದನ್ನು ನೆನಪಿಸಿಕೊಂಡರೆ, ಗಾಂಧಿಯ ಧ್ಯಾನ ಅರ್ಥವಾಗುತ್ತದೆ. ಆಧುನಿಕ ನಾಗರಿಕ ಸಮಾಜ ಮತ್ತು ಆಧುನಿಕ ತಂತ್ರಜ್ಞಾನಗಳ ಪರಸ್ಪರ ಸಂಭೋಗದಿಂದ ಹುಟ್ಟುವ ಆಧುನಿಕ ಯಂತ್ರ ನಾಗರಿಕತೆಯ ನಿರಾಕಾರ ದೈತ್ಯ ಹಿಡಿತದ ಶಕ್ತಿಯನ್ನು ಗ್ರಹಿಸುತ್ತಾರೆ. ಆದರೆ ಗಾಂಧಿ ಮಂಡಿಸುವ ಪರ್ಯಾಯದಲ್ಲೇ ವಿಶಿಷ್ಟತೆ ಇರುವುದು.

ಪಾಶ್ಚಾತ್ಯ ನಾಗರಿಕತೆ, ಲೋಲುಪವಾದದ್ದು ಎಂಬ ಗ್ರಹಿಕೆ ಪೌರ್ವಾತ್ಯ ದೇಶಗಳಲ್ಲಿ ತೀರ ಸಾಮಾನ್ಯ. ಗಾಂಧಿಯೂ ಈ ರೀತಿಯ 'ನಮ್ಮ ಶ್ರೇಷ್ಠ ಪರಂಪರೆ' ಎಂದು ಉಲ್ಲೇಖ ಮಾಡುತ್ತಾರೆ. ಆದರೆ ಓರಿಯೆಂಟಲ್ ಮೂಸೆಗೆ ಬೀಳುವುದಿಲ್ಲ. ಅವರು ಸೂಚಿಸುವ ಪರ್ಯಾಯ ಏಕಕಾಲಕ್ಕೆ, ಪಾಶ್ಚಾತ್ಯ ನಾಗರಿಕತೆ ಮತ್ತು ಆಗ ಭಾರತದಲ್ಲಿ ಮೊಳಕೆಯೊಡೆಯುತ್ತಿದ್ದ 'ನಮ್ಮ ಶ್ರೇಷ್ಠ ಪರಂಪರೆ' ಎಂಬ ವೈದಿಕ, ರಾಜಶಾಹೀ ಪರಿಕಲ್ಪನೆಯನ್ನೂ ನಿರಾಕರಿಸುತ್ತದೆ. ನಾಗರಿಕತೆಯ ಕ್ರಿಟಿಕ್ ಆಗಿ ಗಾಂಧಿ ಅನನ್ಯಾದೃಶ ಅನ್ನಿಸುವುದು ಈ ಕಾರಣಕ್ಕಾಗಿ.

ಗಾಂಧಿ ಗ್ರಾಮಸ್ವರಾಜ್ಯವನ್ನು ಪರ್ಯಾಯವಾಗಿ ಮುಂದಿಡುವಾಗ ಸುಮಾರಾಗಿ ನಾಗರಿಕತೆಯ ಎಲ್ಲಾ ನೆಲೆಗಳನ್ನೂ ಗ್ರಹಿಸುತ್ತಾರೆ. ನಗರ–ಗ್ರಾಮ, ವ್ಯಕ್ತಿ ಸ್ವಾತಂತ್ರ್ಯ–ಸಾಮುದಾಯಿಕ ವಿವೇಕ, ಪ್ರಭುತ್ವ–ಪ್ರಜಾತಾಂತ್ರೀಕರಣ, ಪೇಟೆಂಟ್–ಸಾಮುದಾಯಿಕ ಜ್ಞಾನ, ಪ್ರಗತಿಶೀಲ ಅಭಿವೃದ್ಧಿ–ಸ್ವಸಂತೃಪ್ತ, ಸುಸ್ಥಿರ ಅಭಿವೃದ್ಧಿ, ಗ್ರಾಹಕ ಲೋಲುಪತೆ–ನಿರಾಕರಣೆ,ಅಸ್ವಾದ ಹೀಗೆ ಗಾಂಧಿಯ ಪ್ರಮೇಯಗಳನ್ನು ಪಟ್ಟಿ ಮಾಡಬಹುದು.ಆದರೆ ಈ ಪರ್ಯಾಯ ಕಲ್ಪನೆ ಆ ಕಾಲದ ಭಾರತೀಯ ಕಲ್ಪನೆಯೂ ಅಲ್ಲ. ಗಾಂಧಿ ಸತತವಾಗಿ ಭಾರತೀಯ ಸ್ವರ್ಣಯುಗವನ್ನು ನಿರಾಕರಿಸುತ್ತಾರೆ. ಹಿಂದ್ ಸ್ವರಾಜ್ ಅನ್ನು ಹೇಗೇ ತಿರುಗಾ ಮುರುಗಾ ಓದಿದರೂ, ಪಾಶ್ಚಿಮಾತ್ಯ ನಾಗರಿಕತೆಯನ್ನು ಎದುರಿಸಲು ನಮ್ಮ 'ವೈಭವೀಕೃತ ಭಾವುಕ ಭಾರತೀಯ ಚರಿತ್ರೆ'ಯನ್ನು ಗಾಂಧಿ ಬೆನ್ನಿಗಿರಿಸಿಕೊಂಡಂತೆ ಕಾಣುವುದಿಲ್ಲ.

ಎಲ್ಲೋ ಅಲ್ಲಿ–ಇಲ್ಲಿ ಗೊಣಗಿದಂತೆ, 'ನಮ್ಮ ಐದು ಸಾವಿರದ ಇತಿಹಾಸ' ಎಂದರೂ, ವಿವರಗಳಿಗೆ ಬರುವಾಗ, ಅತ್ಯಂತ ಸ್ಥಳೀಯ ವಿವರಗಳನ್ನು ಬಳಸುತ್ತಾರೆ.

ನಾಗರಿಕತೆ ಎಂಬುದಕ್ಕೆ ಬಳಸುವ ಗುಜಾರಾತಿ ಪದದ ಅರ್ಥ 'ಉತ್ತಮ ನಡವಳಿಕೆ' ಎನ್ನುತ್ತಾರೆ ಗಾಂಧಿ. ಆವಿಷ್ಕಾರದ ಉದಾಹರಣೆಯಾಗಿ ಅವರು ಬಳಸುವುದು ನೇಗಿಲನ್ನು.

ಒಂದು ಯಜಮಾನ ಸಂಸ್ಕೃತಿಯನ್ನು ಎದುರಿಸಲು 'ನಮ್ಮಲ್ಲೂ ಅಂಥಾದ್ದೇ ಸಾಧನೆಗಳಿದ್ದವು' ಎಂದು ಬಿಂಬಿಸುವ ಕೆಲಸ ನಮ್ಮಲ್ಲೂ ನಡೆಯುತ್ತಿದ್ದ ಕಾಲ ಅದು. ಓರಿಯೆಂಟಲ್ 'ಮೂಸೆ' ಮತ್ತು 'ಕನ್ನಡಿ' ಈಗ ಎಲ್ಲರಿಗೂ ಗೊತ್ತಿರುವ ವಿಚಾರ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಪಟ್ಟಭದ್ರ ನೆಲೆಗಳು 'ಅಷ್ಟು ಶಿಖರ' ಕಲ್ಪನೆಯನ್ನೂ, ಅತ್ಯುಚ್ಚ ಸಾಧನೆಗಳ ಪ್ರತೀಕಗಳನ್ನೂ, ನಾಗರಿಕತೆಯ ಸಂಕೇತಗಳೆಂದು ಮಾನ್ಯ ಮಾಡುತ್ತವೆ. ನಮ್ಮಲ್ಲಂತೂ ಇವಕ್ಕೆ ಆತು ಬೀಳದೇ ರಾಷ್ಟ್ರೀಯತೆಯ ಮೂಸೆ ಸೃಷ್ಟಿ ಮಾಡುವುದೇ ಅಸಾಧ್ಯ ಎಂಬ ರೀತಿಯಲ್ಲಿ ಈಗಲೂ ಹಿಂದುತ್ವವಾದಿಗಳು ಒದ್ದಾಡುವುದು ನೋಡಿದರೆ, ಈ ಹೆಜಮನಿಯ ಶಕ್ತಿ ಅರ್ಥವಾದೀತು.

ಗಾಂಧಿ ಈ ಎರಡನ್ನೂ ತಾರ್ಕಿಕವಾಗಿಯೇ ನಿರಾಕರಿಸುತ್ತಾರೆ. ಗ್ರಾಮ ಸ್ವರಾಜ್ ಮತ್ತು ಗ್ರಾಮಗಣತಂತ್ರವನ್ನು ಭಾರತದ ರಾಜಶಾಹೀ ಹಾಗೂ ಪುರೋಹಿತಶಾಹಿ ಅಂದೂ ಒಪ್ಪಿರಲಿಲ್ಲ, ಇಂದೂ ಒಪ್ಪಿಲ್ಲ ಎಂಬುದನ್ನು ಗಮನಿಸಿದರೆ, ಗಾಂಧಿಯ ಹವಣಿಕೆಯ ಆಳ, ವಿಸ್ತಾರ ಅರ್ಥವಾಗುತ್ತದೆ. ಭಾರತವನ್ನು ಯುರೋಪೀಕರಣಗೊಳಿಸುವ, ಭಾರತ ಯುರೋಪೀಕರಣಗೊಳ್ಳುವ ಬಗ್ಗೆ ಗಾಂಧಿ ತೀವ್ರವಾಗಿ ಚಿಂತಿಸುತ್ತಾರೆ. 'ಅವರಂತೇ ನಾವೂ ಆಗಬೇಕು' ಎಂಬ ಹಂಬಲ ೧೯ನೇ ಶತಮಾನದಲ್ಲಿ ಆರಂಭವಾದದ್ದು ಇಂದಿಗೂ ಮುಂದುವರಿದಿದೆ.

ರೂಬುರೂಬು ಪಾಶ್ಚಿಮಾತ್ಯ ಮತ್ತು 'ಭಾರತೀಯ ಪೋಷಾಕಿ'ನ ಪಾಶ್ಚಾತ್ಯೀಕರಣ ಎರಡನ್ನೂ ಗಾಂಧಿ ನಿರಾಕರಿಸಿ, ಗ್ರಾಮೀಣ ಭಾರತವನ್ನು ಪರ್ಯಾಯವಾಗಿ ಮುಂದಿಡುತ್ತಾರೆ. ಗಾಂಧಿಯ ಮ್ಯಾಜಿಕ್ ಇರುವುದು, ನಿಜ ನಿಜ ಅನ್ನಿಸುವಂಥಾ ಮಂಡನೆಯಲ್ಲಿ. ಚಾರಿತ್ರಿಕವಾಗಿ, ನಮ್ಮ ಹಳ್ಳಿಗಳು ಖಂಡಿತವಾಗಿಯೂ ಆದರ್ಶ ರಿಪಬ್ಲಿಕ್‌ಗಳಾಗಿದ್ದವು ಅನ್ನಿಸುವುದಿಲ್ಲ. ಅಂಬೇಡ್ಕರ್ ಹೇಳುವ ಜಾತಿಯ ಕೊಂಪೆಗಳೂ ಆಗಿದ್ದವು. ಈ ಗ್ರಾಮಗಳು ಯಜಮಾನ ಸಂಸ್ಕೃತಿಯನ್ನು ದೂರವಿಡುವ ವಿಶಿಷ್ಟ ಧಾರ್ಢ್ಯತೆಯನ್ನು ಹೊಂದಿದ್ದವು ಎಂಬುದನ್ನು ಗಾಂಧಿ ಗಮನಿಸುತ್ತಾರೆ. ಆ ಕಾರಣಕ್ಕೇ ಈ ಪರ್ಯಾಯವನ್ನು ಮುಂದಿಡುತ್ತಾರೆ. ಒಂದರ್ಥದಲ್ಲಿ ಇದು ಕಲ್ಪಿತ ಪರ್ಯಾಯ. ಈ ಗ್ರಾಮ ಸ್ವರಾಜ್ಯ ಗಾಂಧಿಯ ಬೌದ್ಧಿಕ ನಿರ್ಮಿತಿ.

ಹಿಂದ್ ಸ್ವರಾಜ್‌ನ ರಚನೆಯೇ ಗಾಂಧಿಯ ಬೌದ್ಧಿಕ ಹವಣಿಕೆಗೆ ಸಾಕ್ಷಿ. ಸಂಭಾಷಣೆಯ ವಿಧಾನದ ಮೂಲಕ ಕಟ್ಟುವ ಪರಂಪರೆ ನಮ್ಮಲ್ಲಿ ಸುಪರಿಚಿತ. ಚಾರಿತ್ರಿಕವಾಗಿ ಗ್ರಾಮಗಳ ಮೌಢ್ಯ, ಜಾತೀಯತೆ, ಮತ್ತು ಯಥಾಸ್ಥಿತಿಗೆ ಅಂಟಿಕೊಳ್ಳುವ ಸ್ವಭಾವವನ್ನು ಸ್ಥಾಯೀ ಸ್ವಭಾವವೆಂದು ಗಾಂಧಿ ಬಗೆಯುವುದಿಲ್ಲ. ಅವನ್ನು ಸರಿಪಡಿಸಿದರೆ, ಅವು ಸುಸಂಬದ್ಧ ಪರ್ಯಾಯವಾಗಬಹುದೆಂಬುದು ಗಾಂಧಿಯ ವಾದ. ಪಶ್ಚಿಮದ ನಾಗರಿಕತೆಯನ್ನು ಗಾಂಧಿ ತಿರಸ್ಕರಿಸಿ, ಗ್ರಾಮೀಣ ಸ್ವರಾಜ್ಯವನ್ನು ಪರ್ಯಾಯವಾಗಿ ಮುಂದಿಡುವಾಗ, ಪಶ್ಚಿಮದಿಂದ ಗಾಂಧಿ ಸ್ವೀಕರಿಸಿದ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವದ ಆಶಯಗಳನ್ನೂ ಕಸಿಮಾಡುತ್ತಾರೆ.

ಸಿ.ಎಫ್.ಆಂಡ್ರ್ಯೂಸ್‌ಗೆ ಬರೆದ ಪತ್ರವೊಂದರಲ್ಲಿ, ಭಾರತ ಶಾಂತಿಪ್ರಿಯ ದೇಶವೆಂಬ ಮಾತನ್ನು ಅಲ್ಲಗಳೆಯುತ್ತ, "ಅಹಿಂಸೆ ಈ ದೇಶದ ನಾಗರಿಕತೆಯ ಅಂಶವೆಂದು ನನಗನ್ನಿಸುವುದಿಲ್ಲ. ಹೊಸಮೌಲ್ಯವೊಂದನ್ನು, ಈ ನಾಗರಿಕತೆಯೊಳಗೆ ಅಂತರ್ಗತಗೊಳಿಸಲು ನಾನು ಯತ್ನಿಸುತ್ತಿದ್ದೇನೆ" ಎನ್ನುತ್ತಾರೆ ಗಾಂಧಿ.

ಭಾರತದ ವೈದಿಕ ಯಜಮಾನ ಸಂಸ್ಕೃತಿ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿ ಎರಡನ್ನೂ ನೇರಾನೇರ ವಿರೋಧಿಸದೆ, ತನ್ನತನವನ್ನು ಬಿಡದ ಜಿಗುಟುತನ ಹೊಂದಿದ್ದ ಗ್ರಾಮೀಣ ಭಾರತ, ಗಾಂಧಿಯ ಅಸಹಕಾರ ಮತ್ತು ನಿರಾಕರಣೆಯ ಕಲ್ಪನೆಗೆ ವಸ್ತು ಪ್ರತಿರೂಪವನ್ನು ನೀಡಿತ್ತು ಅನ್ನಿಸುತ್ತೆ. ಗ್ರಾಮೀಣ ಭಾರತದ ನಿರಾಕರಣೆಯ 'ಲೋಮ್ಯೆಮೆಟಿಕ್' ಗೆಸ್ಚರ್ ಗಾಂಧಿಗೆ ಪ್ರಿಯವಾಗಿ ಕಂಡಿರಲೂಬಹುದು.

ಸ್ವಾಯತ್ತತೆಯ ಮೂಲಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುತ್ತಾ, ಪ್ರಭುತ್ವದ ಹಿಡಿತದಿಂದ ದೂರವಿರುವ ಒಂದು ರಚನೆ ಗಾಂಧಿಗೆ ಮುಖ್ಯ. ಗಾಂಧಿಗೆ ಎದುರಿಗಿದ್ದ ಪ್ರಭುತ್ವ, ವಸಾಹತುಶಾಹಿ ಪ್ರಭುತ್ವ. ಆದರೆ, ರಾಜಕೀಯವಾಗಿ, ಆಡಳಿತಾತ್ಮಕವಾಗಿ ವಸಾಹತುಶಾಹಿ ತೊಲಗಿದ ಬಳಿಕ, ಭಾರತೀಯವಾದ ಪ್ರಭುತ್ವವೊಂದು, ಅಷ್ಟೇ ಕ್ರೂರವೂ, ದಪ್ಪಚರ್ಮವುಳ್ಳದ್ದೂ ಆಗಿರುವ ಸಾಧ್ಯತೆಯ ಬಗ್ಗೆ ಗಾಂಧಿ ಪದೇಪದೇ ಪ್ರಸ್ತಾಪಿಸುತ್ತಾರೆ. ಈ ಬದಲಾವಣೆ, ಪಾಶ್ಚಿಮಾತ್ಯ ನಾಗರಿಕತೆಯ ಮುಂದುವರಿಕೆಯೇ ಆಗಿರುತ್ತದೆ. ಪರ್‍ಯಾಯ ನಾಗರಿಕತೆಯ ಮಾದರಿಯೊಂದನ್ನು, ನೀವು ಮುಂದಿಡುವುದಾದಲ್ಲಿ, ಅದರ ಒಳರಚನೆಯೂ ವಿಭಿನ್ನವಾಗಿರಬೇಕಾಗುತ್ತದೆ. ಈ ಆಧುನಿಕ ಶಕ್ತಿ ಕೇಂದ್ರಗಳನ್ನೂ, ನಿಯಂತ್ರಕ ಶಕ್ತಿಗಳನ್ನೂ ಎದುರಿಸುವ ಸ್ವಾಯತ್ತತೆಯನ್ನೂ ಈ ಪರ್‍ಯಾಯ ಹೊಂದಿರಬೇಕಾಗುತ್ತೆ.

ಸ್ಥಳೀಯ ಸ್ವಾಯತ್ತತೆ ಪ್ರಭುತ್ವವನ್ನು ಪೂರ್ತಿ ನಿರಾಕರಿಸುವುದೂ ಇಲ್ಲ, ಪ್ರಭುತ್ವ ಪೂರ್ತಿ ನಿರಸನಗೊಳ್ಳುತ್ತದೆಂಬ ಭ್ರಮೆಯೂ ಇದಕ್ಕಿಲ್ಲ. ಪ್ರಭುತ್ವದ ಮಧ್ಯಪ್ರವೇಶ, ಮತ್ತು ನಿಯಂತ್ರಣವನ್ನು ಕನಿಷ್ಠ ಪ್ರಮಾಣಕ್ಕಿಳಿಸುವ ಸ್ವಾಯತ್ತತೆ ಇದು ಎಂದು ಭಾವಿಸಬೇಕೇನೋ. ಆದರೆ, ಈ ಗ್ರಾಮ ಪ್ರಭುತ್ವಗಳು ಸದ್ಯೋ ವರ್ತಮಾನದಲ್ಲಿ, ಗ್ರಾಮ ಸ್ವರಾಜ್ಯಗಳಾಗದೇ, ಗ್ರಾಮ ಪಂಚಾಯಿತಿಗಳಾಗಿವೆ, ಎಂಬ ಆಕ್ಷೇಪ ಎತ್ತಬಹುದು. ಇಂದು ಗ್ರಾಮ ಪಂಚಾಯಿತಿಗಳ ಬಗ್ಗೆ, ಆಕ್ಷೇಪಿಸುವವರು, ಈ ವಿಕೃತ ಬೆಳವಣಿಗೆಯನ್ನು, ಗ್ರಾಮ ಸ್ವರಾಜ್ಯದ ಸಹಜ ಸ್ವರೂಪವೆಂದು ಭಾವಿಸಿದಂತಿದೆ. ಒಂದು ಸ್ವಾಯತ್ತ ಸಮುದಾಯದ ಸ್ವರೂಪವನ್ನು ಗಾಂಧಿ ಎಂದೂ ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ನೆಲೆಗಳಿಂದಷ್ಟೇ ನೋಡಲು ನಿರಾಕರಿಸುತ್ತಾರೆ. ನಾಗರಿಕತೆಯ ಪರ್‍ಯಾಯವೊಂದು ಸಮಗ್ರವಾಗಿರುತ್ತದೆ.

ಇತ್ತೀಚೆಗೆ, ಪ್ರಭುತ್ವವನ್ನು ರೈಲಿಗೆ ಹೋಲಿಸಿದ ವಿವರಣೆ ಇಲ್ಲಿ ಪ್ರಸ್ತುತ ಅನ್ನಿಸುತ್ತೆ. ರೈಲ್ವೇ ನೇರ, ಬಿಗಿ. ರಿಜಿಡ್ ಆದ ರಚನೆ. ಆದರೆ ನಿಮಗೆ ಕಾಮನ್ ಸೆನ್ಸ್ ಇದ್ದರೆ, ಅದನ್ನು ಬಳಸಿ, ಪ್ರಯಾಣಿಸಿ, ಇಳಿದ ಬಳಿಕ, ನಿಮ್ಮ ಗುರಿಯೆಡೆಗೆ ಹೇಗೆ ತಲುಪಿದರೂ ಅದು ಏನೂ ಮಾಡಲಾಗುವುದಿಲ್ಲ. ಅರ್ಥಾತ್, ಪ್ರಭುತ್ವದ ಕೈಯಳವಿನಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳನ್ನು ಅನ್ವೇಷಿಸುವ ಶಕ್ತಿಯೇ ಪರ್‍ಯಾಯ ನಾಗರಿಕತೆಯ ಸ್ವರೂಪವನ್ನು ನಿರ್ಧರಿಸುತ್ತದೆ.

ಆಧುನಿಕ ನಾಗರಿಕತೆಯು ಗ್ರಾಹಕ ಚಾಪಲ್ಯವನ್ನು ಪ್ರೇರೇಪಿಸುತ್ತಾ, ನಮ್ಮನ್ನು ಮಾನಸಿಕ ದಾಸ್ಯಕ್ಕೂ; ಪ್ರಭುತ್ವವನ್ನು ಸಶಕ್ತಗಿಳಿಸುವ ಮೂಲಕ, ನಮ್ಮನ್ನು ಭೌತಿಕ ನಿಯಂತ್ರಣಕ್ಕೂ ಒಳಪಡಿಸುತ್ತಿರುವುದು ೨೦ನೇ ಶತಮಾನದ ಉತ್ತರಾರ್ಧದಂದೀಚೆಗೆ ಸಿದ್ಧವಾಗಿರುವ ವಿಚಾರ.

ಈ ಎರಡೂ ಅಪಾಯಗಳನ್ನು ಮೊದಲೇ ಮನಗಂಡ ದೃಷ್ಟಾರ ಗಾಂಧಿ.

ನೂರು ವರ್ಷಗಳ ಬಳಿಕ, ಈಗ, ಗಾಂಧಿ ಯ ಪರ್ಯಾಯ ಪ್ರಸ್ತುತವೇ ಎಂಬುದು ಪ್ರಶ್ನೆ. ಬೌದ್ಧಿಕ, ತಾತ್ವಿಕ ಸವಾಲಾಗಿ ಉಳಿದರಷ್ಟೇ ಸಾಲದು, ವಾಸ್ತವ ಪರ್ಯಾಯವೇ? ಅದೂ ಜಾಗತಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ?

ಪ್ರಭುತ್ವ ಮತ್ತು ಕಾರ್ಪೊರೇಟ್ ಶಕ್ತಿಗಳು ನಗರೀಕರಣವನ್ನು ಅತ್ಯಂತಿಕ ಗುರಿಯೆಂಬಂತೆ ಪ್ರೋತ್ಸಾಹಿಸುತ್ತಿವೆ. ಈ ನಗರೀಕರಣ ನಮ್ಮನ್ನು ಈ ಎರಡೂ ಶಕ್ತಿಗಳ ಸಂಪೂರ್ಣ ನಿಯಂತ್ರಣದಲ್ಲಿಡುತ್ತವೆ. ಆಧುನಿಕ ಅಭಿವೃದ್ಧಿಯ ಪರಿಣಾಮವಾಗಿ ಉದ್ಭವಿಸಿರುವ ಪರಿಸರ ಮತ್ತು ಹವಾಮಾನ ವೈಪರೀತ್ಯದ ಪರಿಣಾಮಗಳು ಅತ್ಯಂತಿಕ ಅಪಾಯವನ್ನು ಉಂಟುಮಾಡಬಲ್ಲವು ಎಂಬುದು, ಫ್ಯಾಂಟಸಿಯ ಮಟ್ಟದಿಂದ ನಾಳೆಯೇ ಎರಗಬಹುದಾದ ಅಪಾಯ ಎಂಬಷ್ಟು ಸಮೀಪದಲ್ಲಿವೆ. ಪಾಶ್ಚಿಮಾತ್ಯ ನಾಗರಿಕತೆಯ ತೆವಲಿಗೆ ಬಡರಾಷ್ಟ್ರಗಳು ಬಲಿಯಾಗುವುದು ನಿಚ್ಚಳವಾಗುತ್ತಿದೆ. ಹಲವಾರು ಸಮೀಕ್ಷೆಗಳ ಪ್ರಕಾರ, ಜಾಗತಿಕ ತಾಪಮಾನದ ಹೆಚ್ಚಳದಿಂದಾಗಿ, ಹಿಮಬಂಡೆಗಳು ಕರಗಿದರೆ, ಮಾಲ್ಡೀವ್ಸ್‌ನಂಥಾ ಹತ್ತಿಪ್ಪತ್ತು ದ್ವೀಪ ರಾಷ್ಟ್ರಗಳು ಸಂಪೂರ್ಣ ಮುಳುಗಿ ಹೋಗಲಿವೆ. ಗಂಗಾನದಿಯ ನೀರಿನ ಪ್ರಮಾಣ ಅರ್ಧಕ್ಕರ್ಧ ಕಮ್ಮಿಯಾಗಲಿದೆ.

ಈ ಪ್ರಮಾದಕ್ಕೆ, ತನ್ನ ಜೀವನ ಶೈಲಿಯೇ ಕಾರಣ ಎಂದು ಗೊತ್ತಿದ್ದರೂ, ಪಶ್ಚಿಮವಾಗಲೀ, ಪಶ್ಚಿಮದ ಅನುಕರಣೆಯಲ್ಲಿರುವ ನಮ್ಮ ಮಧ್ಯಮ ವರ್ಗವಾಗಲೀ ಯಾವುದೇ ಜೀವನ ಶೈಲಿಯ ಬದಲಾವಣೆಗೆ ಮನಸು ಮಾಡಿಲ್ಲ. ಪಶ್ಚಿಮವಂತೂ, ಇಂಗಾಲದ ಹೆಚ್ಚಳವನ್ನು ಕಡಿಮೆ ಮಾಡಲು, ಉಷ್ಣವಲಯದ ದೇಶಗಳಲ್ಲಿ ಕಾಡು ಬೆಳೆಸಬೇಕೆಂಬ ಸಲಹೆ ಮುಂದಿಟ್ಟವೆ. ನಮ್ಮ ಕಾಡು ನುಂಗಿ ನೊಣೆದದ್ದೇ ಈ ನಾಗರಿಕತೆ..!

ಸದ್ಯೋಭವಿಷ್ಯದಲ್ಲಿ ಕಾದಿರುವ ಈ ಅಪಾಯವನ್ನು ಎದುರಿಸಲು, ಈಗಲೂ ಪಶ್ಚಿಮ ಯೋಚಿಸುತ್ತಿರುವುದು ಕರೆಕ್ಟಿವ್ ಟೆಕ್ನಾಲಜಿಗಳನ್ನೇ..

ಅಪಾರ ಜನಸಂಖ್ಯೆ, ತೀವ್ರ ಉಷ್ಣದ ಬೇಸಿಗೆಯ ನಮ್ಮ ದೇಶ ಎದುರಿಸಬಹುದಾದ ಭವಿಷ್ಯದ ಅಪಾಯಗಳ ಬಗ್ಗೆ ನಮ್ಮ ಆಡಳಿತಗಾರರು ಗಂಭೀರವಾಗಿ ಯೋಚಿಸಿದಂತಿಲ್ಲ. ಸಂಪನ್ಮೂಲಗಳ ಬಳಕೆ ಕಡಿಮೆ ಮಾಡಿದರೆ, ಈಗಾಗಲೇ ಸ್ಥಾಪಿಸಿರುವ ಜೀವನಮಟ್ಟ ಮತ್ತು ಅದಕ್ಕೆ ಹೆಣೆದುಕೊಂಡಿರುವ ಆರ್ಥಿಕ ಸಂರಚನೆ ಢಮಾರ್ ಅಂದು ನಾಶವಾಗುವ ಸಾಧ್ಯತೆ ಪಶ್ಚಿಮವನ್ನಷ್ಟೇ ಅಲ್ಲ, ವಸಾಹತುಗಳಲ್ಲಿ ಅದರ ಬೀಜದಿಂದ ಹುಟ್ಟಿದ ಸಂತಾನವನ್ನೂ ಕಾಡುತ್ತಿದೆ. ಈ ನಾಗರಿಕತೆ ಅಭಿವೃದ್ಧಿಯಾದದ್ದೇ ವಸಾಹತುಗಳ ಸಂಪನ್ಮೂಲಗಳ ದೋಚುವಿಕೆಯಿಂದ ಎಂಬುದು ನೆನಪಿದ್ದರೆ, ಎಂಥಾ ನಾಜೂಕು ಸ್ಥಿತಿಯಲ್ಲಿ ಈ ನಾಗರಿಕತೆ ಇದೆ ಎಂಬುದು

ಅರ್ಥವಾದೀತು.

ನಮ್ಮ ಆಡಳಿತಗಾರರು, ೨೦೨೫ರ ವೇಳೆಗೆ ಸೂಪರ್ ಪವರ್ ಆಗುವ ಕನಸು ಕಾಣುತ್ತಾ ವಿಶನ್ ೨೦೨೫ ಎಂಬ ಡಾಕ್ಯುಮೆಂಟ್ ಕಣ್ಣೆದುರು ಇಟ್ಟುಕೊಂಡು, ತಡವರಿಸಿ ನಡೆಯುತ್ತಿದ್ದಾರೆ. ನೀವು 'ಕನ್ಸೂಮ್' ಮಾಡುವ ಪ್ರಮಾಣವೇ ಅಭಿವೃದ್ಧಿಯ ಪ್ರಮಾಣವೆಂದಾದರೆ, ಅದಕ್ಕೆ ಬೇಕಾದ ಮೂಲ ವಸ್ತು, ಸಂಪನ್ಮೂಲ ಎಲ್ಲಿಂದ ಮತ್ತು ಹೇಗೆ ಬರುತ್ತದೆ ಎಂಬ ಬಗ್ಗೆ ದೂರಗಾಮೀ ಲೆಕ್ಕಾಚಾರ ಬೇಕಲ್ಲ..? ಅರ್ಥಶಾಸ್ತ್ರದ ರೆಲೆವನ್ಸ್ ಇರುವುದೇ ಈ ಪ್ರೌಢಿಮೆಯಲ್ಲಿ. ಯೋಜನೆಯ ಪ್ರೌಢಿಮೆ ಇರುವುದು ಇದರ ಪರಿಣಾಮಗಳ ಅರಿವಿನಲ್ಲಿ. ನಾನು ಈ ಹಂತದಲ್ಲಿ, ಸಾಂಸ್ಕೃತಿಕ ಪಲ್ಲಟಗಳ ಬಗ್ಗೆ ಮಾತನಾಡುತ್ತಿಲ್ಲ. ಕೇವಲ ಭೌತಿಕ ಪರಿಣಾಮಗಳ ಬಗ್ಗೆ ಮಾತ್ರ..! ಈ ಗ್ರಾಹಕ ಸಾಮರ್ಥ್ಯವನ್ನು ಪ್ರೋತ್ಸಾಹಿಸುವುದರ ಮೂಲಕ ಒಂದು ಆರ್ಥಿಕತೆ ಜೋಶ್‌ಗೆ ಹೋಗುವುದನ್ನು ನಮ್ಮಲ್ಲೇ ಈಗ ನೋಡುತ್ತಿದ್ದೇವೆ. ಆದರೆ ತಿಂದದ್ದೆಲ್ಲಾ ಜೀರ್ಣವಾಗುವ ಜಠರ ದಕ್ಷತೆ ಕೆಲವೇ ಪ್ರಾಣಿವರ್ಗಕ್ಕಿದೆ., ದುರದೃಷ್ಟವಶಾತ್ ಮನುಷ್ಯ ಜಾತಿ ಇಂಥಾ ವರ್ಗಕ್ಕೆ ಸೇರಿಲ್ಲ. ಬಳಸುವ ವಸ್ತುಗಳ ವೇಸ್ಟೇಜ್ ಪ್ರಮಾಣ ಹೆಚ್ಚಿದಷ್ಟೂ, ವಿಲೇವಾರಿ ಸಮಸ್ಯೆ ಹೆಚ್ಚುವುದು.

ಜಗತ್ತಿನ ಕೃಷಿ ಭೂಮಿಯಲ್ಲಿ ನಮ್ಮ ಪಾಲು ಕೇವಲ ಶೇ.೨. ಜನಸಂಖ್ಯೆ ಶೇ.೧೭ರಷ್ಟು. ಈ ಭೂಮಿಯಲ್ಲೂ ಅರ್ಧಕ್ಕಿಂತ ಹೆಚ್ಚು ಮಳೆಯಾಧಾರಿತ. ಶೇ.೬೦ರಷ್ಟು ಜನ ಈಗಲೂ ಕೃಷಿ ಹಿನ್ನೆಲೆಯ ಗ್ರಾಮಾಂತರಗಳಲ್ಲಿ ಬದುಕುತ್ತಿದ್ದಾರೆ. ಒಂದುವೇಳೆ ಈ ಮಂದಿಗೆ ಆಧುನಿಕ ಸವಲತ್ತುಗಳನ್ನು ಪಡೆಯಬೇಕೆಂಬ ಹಂಬಲ ಬಂದರೆ, ಅದನ್ನು ಪೂರೈಸುವ ಸಾಮರ್ಥ್ಯ ಯಾವ ಪ್ರಭುತ್ವಕ್ಕೂ ಇಲ್ಲ. ಅಷ್ಟು ಮಾತ್ರವಲ್ಲ, ಈ ಮಂದಿಗೇ ಕೊಳ್ಳುವ ಆರ್ಥಿಕ ಸಾಮರ್ಥ್ಯ ಇಲ್ಲದಿದ್ದರೆ, ಅ ಮಾನಸಿಕ ಬೇಗುದಿಯ ಪರಿಣಾಮ ಎಂಥಾದ್ದಿದ್ದೀತು..?

ಇನ್ನೊಂದೆಡೆ, ನಮ್ಮ ಸಿರಿವಂತ ಮತ್ತು ಮಧ್ಯಮ ವರ್ಗದ ಗ್ರಾಹಕ ರಭಸ ಹೇಗಿದೆಯೆಂದರೆ, ತಮ್ಮ ಅಗತ್ಯ, ಅಸೆಗಳ ಪೂರೈಕೆಗೆ, ಯಾರ ಹೊಟ್ಟೆಗೆ ಹೊಡೆಯಲೂ ಇದು ತಯಾರಾಗಿರುವಂತಿದೆ. ನಮ್ಮ ಬಜೆಟ್‌ನ ಅರ್ಧಕ್ಕೂ ಹೆಚ್ಚು ಹಣ ನಮ್ಮ ಸೇವೆಗಾಗಿರುವ ನೌಕರರಿಗೆ ಹೋಗುತ್ತಿದೆ.. ನಗರಗಳಲ್ಲಿರುವ 'ಕೋಕೊನಟ್'* ಮನುಷ್ಯರ ಸಂಖ್ಯೆ ಶೇ.ಹತ್ತೋ ಹದಿನೈದೋ ಇದ್ದೀತಷ್ಟೇ. ಇವರನ್ನು ಸಂಭಾಳಿಸುವಷ್ಟಕ್ಕೇ ನಮ್ಮ ಸರ್ಕಾರ ಸುಸ್ತು ಹೊಡೆಯುತ್ತಿದೆ. ನಗರಗಳ ತ್ಯಾಜ್ಯವನ್ನು ಹಳ್ಳಿಗಳಲ್ಲಿ ಸುರಿಯುವುದು, ವಿದ್ಯುತ್ ಬೇಡಿಕೆ ಈಡೇರಿಸಲು ಹೊಸ ವಿದ್ಯುತ್ ಘಟಕ ಸ್ಥಾಪಿಸುವುದು, ಹೀಗೆ ಸರ್ಕಾರ ಬೆಂಕಿ ಬಿದ್ದಾಗ ಬಾವಿ ತೋಡುವ ಪ್ರವೃತ್ತಿಯನ್ನೇ ಯೋಜನೆಗಳೆಂಬಂತೆ ಬಿಂಬಿಸುತ್ತಿದೆ.

ಮತ್ತೆ ಗಾಂಧಿಯ ದರ್ಶನಕ್ಕೆ ಮರಳುವುದಾದರೆ, ನಾಗರಿಕತೆಗೆ ಸೂಚಿಸುವ ಯಾವುದೇ ಪರ್ಯಾಯ ಎರಡು ಅಂಶಗಳನ್ನು ಗಮನಿಸಬೇಕು.

೧. ಪ್ರಭುತ್ವದ ಹಿಡಿತವನ್ನು ಕಡಿಮೆಗೊಳಿಸುವ ಸಾಧ್ಯತೆ ೨. ಮತ್ತು ಸಂಪನ್ಮೂಲಗಳ ಬಳಕೆಯನ್ನು ಕಡಿಮೆಗೊಳಿಸುವ ಸಾಧ್ಯತೆ.

ವಿಕೇಂದ್ರೀಕರಣದ ಬಗ್ಗೆ ನಾವು ಗಂಭೀರವಾಗಿದ್ದರೆ, ಈಗಲೂ ನಮ್ಮ

ಗ್ರಾಮಗಳನ್ನು, ಸ್ವಾಯತ್ತಗೊಳಿಸಬಹುದು.

ಎರಡನೇ ವಿಚಾರದ ಬಗ್ಗೆ, ಸಣ್ಣ ಸಾಧ್ಯತೆಯನ್ನು ಮುಂದಿಡುವೆ....! ಬೆಂಗಳೂರಿನ ಯಾರೇ ಆಗಲಿ, ಒಂದುವಾರ ಹಳ್ಳಿಯೊಂದರಲ್ಲಿ ನೆಲೆಸಿ ನೋಡಿ. ನಮ್ಮ ಗ್ರಾಹಕತೆಯ ಪ್ರಮಾಣ ದಿಢೀರನೆ ಇಳಿಯುತ್ತದೆ. ಸ್ಥಳೀಯ ಊರುವಲಿನ ಬಿಸಿನೀರು, ಅನ್ನ, ಹಾಲು, ತರಕಾರಿ, ಹೀಗೆ. ಸ್ವಸಂಪೂರ್ಣ ಜಗತ್ತೊಂದರಲ್ಲಿ ಬಾಳುತ್ತಿರುವಂತೆ ಭಾಸವಾಗುತ್ತದೆ. ಇಡೀ ಜೀವನವೆ, 'ಲೋ ಎನರ್ಜಿ ಇಂಟೆನ್ಸಿವ್' ಚೌಕಟ್ಟಿನಲ್ಲಿರುತ್ತದೆ. ಇದನ್ನು ಖಾಯಂ ಅಂತ ಸಜೆಸ್ಟ್ ಮಾಡ್ಲಿಕ್ಕಾಗ್ತದಾ? ಆ ಕೊಂಪೆಯಲ್ಲಿ ಇರೋದಿಕ್ಕಾಗ್ತದಾ? ಇಂಥಾ ಪ್ರಶ್ನೆಗಳು ಧಡಕ್ಕನೆ ಎದ್ದು ಬರುತ್ತವೆ. ನಮ್ಮ ನಗರವಾಸೀ ಮಧ್ಯಮ ವರ್ಗ ಎಷ್ಟು ಪುಕ್ಕಲು ಎಂದರೆ, ಈ ಥರ ಹುಳ ಬಿಟ್ಟರೂ ಹೆದರಿ ಕಂಗಾಲಾಗುತ್ತೆ..!

ನಮ್ಮ ಹಳ್ಳಿಗಳನ್ನು ತಿಪ್ಪೆ ಗುಂಡಿ ಮಾಡಿದವರು ಯಾರು ಎಂಬ ಪ್ರಶ್ನೆಗೆ ಉತ್ತರಿಸಲು ಯಾರೂ ತಯಾರಿಲ್ಲ. ಈ ಗ್ರಾಮ ಸ್ವರಾಜ್ಯದ ಪರ್ಯಾಯವನ್ನುಆತ್ಯಂತಿಕ ಪರ್ಯಾಯದ ಬೌದ್ಧಿಕ ಕಸರತ್ತು ಎಂದು ಭಾವಿಸಬೇಕಿಲ್ಲ. ನಾವಿರುವ ಸಂದರ್ಭದಲ್ಲಿ, ಸಣ್ಣ ಪು ಟ್ಟ ಬದಲಾವಣೆಯೂ ಗಮನಾರ್ಹ ಸುಧಾರಣೆಯನ್ನು ತರಬಲ್ಲುದು. ಈ ಪರ್ಯಾಯ, ಸನ್ಯಾಸದ ವಿರಕ್ತಿಯನ್ನು ಹೇಳುವುದಿಲ್ಲ. ರಸ್ತೆ, ಟಿವಿ, ಕಂಪ್ಯೂಟರ್ ಇವುಗಳನ್ನು ಇಟ್ಟುಕೊಂಡೂ ನಿರಾಕರಣೆ, ಸಂಯಮದ ಮೂಲಕ ಈ ಪ್ರಪಾತಕ್ಕಿಳಿವ ವೇಗೋತ್ಕರ್ಷವನ್ನು ಕಡಿಮೆ ಮಾಡಿದರೂ, ಬೇಕಷ್ಟಾಯಿತು. ಒಂದಷ್ಟು ಧೈರ್ಯ ಹೆಚ್ಚಿಸಿಕೊಂಡು, ಒಂದಷ್ಟು ಬಾಯಿರುಚಿ ಕಡಿಮೆ ಮಾಡಿಕೊಂಡರೂ ಸಾಕು.

* ಕೋಕೋನಟ್ ಮ್ಯಾನ್ ಅಂದರೆ, ಹೊರಗೆ ಕಂದು, ಒಳಗೆ ಬಿಳಿ..! ಅರ್ಥಾತ್ ಪಾಶ್ಚಿಮಾತ್ಯ ಅನುಕರಣೆಯಲ್ಲಿ ಸಾರ್ಥಕ್ಯ ಕಾಣುತ್ತಿರುವ ಭಾರತೀಯ.

* * *

ಜನಪದ ವ್ಯಕ್ತಿ

ಅಂಕೇಗೌಡ

ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಆದಾಯವನ್ನು ಪುಸ್ತಕಗಳ ಸಂಗ್ರಹಕ್ಕಾಗಿಯೇ ಖರ್ಚುಮಾಡಿ ಬರಿಗೈದಾಸನಾಗಿರುವಂಥ ವ್ಯಕ್ತಿ ಸಿಗುವುದು ಅಪರೂಪ. ಆ ವ್ಯಕ್ತಿ ಸ್ವತಃ ಬರಿಗೈದಾಸನೆನಿಸಿದರೂ ಕರ್ನಾಟಕ ರಾಜ್ಯವನ್ನು ಶ್ರೀಮಂತಗೊಳಿಸಿದ್ದಾನೆ! ಅಂಥ ಅದ್ಭುತ ವ್ಯಕ್ತಿ ಅಂಕೇಗೌಡ. ಅಂಕೇಗೌಡರ ಅಸಾಮಾನ್ಯ ಪುಸ್ತಕ ಪ್ರೇಮವನ್ನು ತಿಳಿಯಬೇಕಾದರೆ ಅವರ ಮನೆಗೇ ಭೇಟಿಕೊಡುವುದು ಅಗತ್ಯ. ಅಲ್ಲಿಗೆ ನೀವು ಹೋದರೆ ನೀವು ಪುಸ್ತಕಗಳ ರಾಶಿಯ ಮಧ್ಯದಲ್ಲಿ ಕಳೆದು ಹೋಗುವಿರಿ. ನಿಮ್ಮನ್ನು ಒಂದು ಲಕ್ಷ ಪುಸ್ತಕಗಳು ಸುತ್ತುವರೆದಿರುತ್ತವೆ! ಅಲ್ಲಿಯ ಯಾವುದೇ ಪುಸ್ತಕದ ಮೇಲೆ ಕೈ ಇಟ್ಟರೂ ಆ ಪುಸ್ತಕದ ಅಪರೂಪತೆಯಿಂದ, ಅದರ ಪ್ರಸಿದ್ಧ ಲೇಖಕನ ಕಾರಣದಿಂದ, ಅದರ ಐತಿಹಾಸಿಕ ಮಹತ್ವದಿಂದ, ಅದರ ಸಾಹಿತ್ಯಕ ಮೌಲ್ಯದಿಂದ, ಆನಂದದಲ್ಲಿ ಮುಳುಗುವಿರಿ. ಸರ್ಕಾರ ಮತ್ತು ಅನೇಕ ಶಿಕ್ಷಣ ಸಂಸ್ಥೆಗಳು ನಡೆಸುವ ಪುಸ್ತಕಾಲಯದಲ್ಲಿ ದೊರೆಯದೆ ಇರುವಂಥ ಪುಸ್ತಕವನ್ನು ನೀವು ಅಲ್ಲಿ ಕಂಡಾಗ ನಿಮಗೆ ಆಶ್ಚರ್ಯ ಮತ್ತು ಸಂತೋಷ ಒಟ್ಟಿಗೆ ಆಗುವುದು. ಅಂಕೇಗೌಡರಂಥ ಪುಸ್ತಕ ಪ್ರೇಮಿ ವ್ಯಕ್ತಿ ಇನ್ನೊಬ್ಬರು ಸಿಗಲಾರರು. ಈ ಪುಸ್ತಕಗಳ ಸಂಗ್ರಹದ ಬೆಲೆಯನ್ನು ಇನ್ನೂ ಕಟ್ಟಬೇಕಾಗಿದೆ. ಮೂವತ್ತೈದು ವರ್ಷಗಳ ಕಾಲ ನಿರಂತರವಾಗಿ ತಮ್ಮ ಆದಾಯದ ಮುಕ್ಕಾಲು ಭಾಗವನ್ನು ಪುಸ್ತಕಗಳ ಖರೀದಿಗಾಗಿಯೇ ವ್ಯಯ ಮಾಡಿದ್ದಾರೆ, ಜೊತೆಗೆ ತಮ್ಮ ಸಂಸಾರವನ್ನು ತೂಗಿಸಿಕೊಂಡು ಹೊಗಿದ್ದಾರೆ. ಸ್ವತಃ ಅಂಕೇಗೌಡರು ಹೆಚ್ಚು ಓದಿದವರಲ್ಲ. ಆದರೆ ಅವರಲ್ಲಿ ಇರುವ ಜ್ಞಾನದ ಹಸಿವು ಮತ್ತು ಅಪರೂಪದ ಪುಸ್ತಕಗಳನ್ನು ರಕ್ಷಿಸಬೇಕೆಂಬ ಅವರ ತೀವ್ರ ಬಯಕೆ ಅವರನ್ನು ಈ ಹವ್ಯಾಸಕ್ಕೆ ಹಚ್ಚಿತು. ಅಂಕೇಗೌಡರಲ್ಲಿರುವ ಪುಸ್ತಕಗಳನ್ನು ನೋಡಿ ಶೀರ್ಷಿಕೆಯನ್ನು ಓದಿ ಸುಮ್ಮನೆ ಕಣ್ಣುಹಾಯಿಸುತ್ತ ಹೋದರೂ ನಿಮಗೆ ಎರಡು, ಮೂರು ದಿನ ಸಮಯ ಬೇಕಾಗುವುದು. ಈಗ ತಮ್ಮ ೬೧ನೇ ವಯಸ್ಸಿನಲ್ಲಿರುವ ಅಂಕೇಗೌಡರ ಪುಸ್ತಕ ಖರೀದಿ ಉತ್ಸಾಹ ಕಿಂಚಿತ್ತೂ ಕಡಿಮೆಯಾಗಿಲ್ಲ. ಇದಕ್ಕೆ ಕಾರಣ ಅವರು ಹೊಂದಿರುವ ಧನ ಸಂಪತ್ತಲ್ಲ. ಬದಲಿಗೆ ಅಂಕೇಗೌಡರ ಈ ಪುಸ್ತಕ ಖರೀದಿ ಹುಚ್ಚಿಗೆ ಸ್ವಲ್ಪವೂ ಬೇಸರಪಟ್ಟುಕೊಳ್ಳದೆ ಅವರೊಂದಿಗೆ ನಗುನಗುತ್ತಾ ಸಹಕರಿಸುತ್ತಾ ಮತ್ತು ಪುಸ್ತಕ ಜೋಡಣೆಯಲ್ಲಿ ನೆರವಾಗುತ್ತಿರುವ ಅವರ ಪತ್ನಿ ಜಯಲಕ್ಷ್ಮಿ ಮತ್ತು ಅವರ ಮಗ. ಸಹಕಾರ ಮನೋಭಾವದ ಪತ್ನಿ ಹಾಗೂ ಮಗ ಇಲ್ಲದೆ ಹೊಗಿದ್ದರೆ ಅಂಕೇಗೌಡರಿಗೆ ಈ ಸಾಧನೆ ಮಾಡಲಾಗುತ್ತಿರಲಿಲ್ಲ. ಇಚ್ಛೆಯಿದ್ದಲ್ಲಿ ದಾರಿಯಿದೆ ಮತ್ತು ಒಳ್ಳೆಯ ಕೆಲಸಕ್ಕೆ ಯಾರು ನೆರವಾಗದಿದ್ದರೂ ದೇವರು ನೆರವಾಗುತ್ತಾನೆ ಎಂಬ ಅನುಭವದ ಮಾತು ಅಂಕೇಗೌಡರ ಹವ್ಯಾಸದಲ್ಲಿ ಸಾಕಾರಗೊಂಡಿದೆ. ಕರ್ನಾಟಕದ ಉದ್ಯಮಿ ಹರಿ ಖೋಡೆ ಇವರ ನೆರವಿಗೆ ಬಂದರು. ಈ ಪುಸ್ತಕಗಳ ಬಗ್ಗೆ ತಿಳಿದ ಅವರು ೨೦ ಲಕ್ಷ ರುಪಾಯಿಗಳ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದಾರೆ! ಹೀಗೆ ಸಾಗುತ್ತದೆ ಅಂಕೇಗೌಡರ ಪುಸ್ತಕ ಸಂಗ್ರಹ ಯಾತ್ರೆ.

(ಅಂಕೇಗೌಡರ ದೂರವಾಣಿ: ೯೨೪೨೮೪೪೯೩೪ : ಮಾಹಿತಿ-ವಿ.ಕ.) – **ಸು.ಕೌ**

ಕಮಲಾದೇವಿ ಚಟ್ಟೋಪಾಧ್ಯಾಯರ ಬಾಲ್ಯದ ದಿನಗಳು

- ಜಸಲೀನ್ ಧಮೀಜ

ಹಸಿರು ಹಸಿರಾದ ಗಿಡ-ಮರಗಳಿಂದ ತುಂಬಿದ, ಪೊದೆ-ಟೊಂಗೆ, ಬಳ್ಳಿ-ಕಾಯಿಗಳಿಂದ ಆವೃತವಾಗಿದ್ದ ಅಹ್ಲಾದಕರ ಪರಿಸರದಲ್ಲಿ ಬಾಲಕಿ ಕಮಲಾ ಬೆಳೆದಳು. ತನ್ನ ಮನೆಯಿದ್ದ ಪರಿಸರವನ್ನು ಅವಳು ಹೃದಯತುಂಬಿ ವರ್ಣಿಸುತ್ತಾಳೆ, "ದಟ್ಟವಾಗಿ ಹರಡಿಕೊಂಡ ಗಿಡ-ಮರ, ತಾಳೆಮರಗಳ ತೋಪು, ಗೋಡೆ-ಮನೆಯಗುಂಟ ಹಬ್ಬಿದ್ದ ಲತೆ-ಬಳ್ಳಿ-ಬಿಳಲು ಮುಂತಾದವು ನಮ್ಮ ಮನೆಯ ವಾತಾವರಣವನ್ನು ಕಾನನದಂತೆ ಅಬೇಧ್ಯವಾಗಿಯೂ, ವಿಸ್ಮಯಕಾರಿಯೂ ಆಗಿ ಮಾರ್ಪಡಿಸಿದ್ದವು. ಅಂತಹ ಸುಂದರ ಪ್ರಕೃತಿಯೊಡನೆ ನಾನು ಬೆಳೆದೆ. ಪಶ್ಚಿಮ ಘಟ್ಟಗಳ ಪಕ್ಕದಲ್ಲಿ ಗೂಡಿನಂತೆ ಹತ್ತಿಕೊಂಡಿದ್ದ ನಮ್ಮ ಊರು ಮಂಗಳೂರು ಆಗ ಎಷ್ಟೊಂದು ದಟ್ಟವಾದ ಕಾಡಿನಿಂದ ಕೂಡಿತ್ತೆಂದರೆ ಎತ್ತರವಾದ ಗಿರಿಯ ಮೇಲಿಂದ ನೋಡಿದಾಗ ಊರು ಕಾಣಿಸದೆ ಬರೀ ಹಸಿರು ಕಾಣಿಸುತ್ತಿತ್ತು. ನಮ್ಮ ಊರಿನ ರಸ್ತೆಗಳು ಗುಡ್ಡಗಾಡಿನ ದಾರಿಗಳಂತೆ ಏಳುತ್ತಾ, ಇಳಿಯುತ್ತಾ ಸಾಗಿಹೋಗಿದ್ದವು. ವಿಶಾಲವಾದ ಅರಬ್ಬೀ ಸಮುದ್ರ, ಮರಳಿನ ಕಡಲ ತೀರ, ಹಸಿರಲ್ಲಿ ಹುದುಗಿರುವ ಊರು ಹೀಗೆ ಅನೇಕ ಸಂಗತಿಗಳು ಮಂಗಳೂರನ್ನು ಆಪ್ಯಾಯಮಾನಗೊಳಿಸಿದ್ದವು." ನಾನು ಕಮಲಾದೇವಿಯೊಡನೆ ಮಂಗಳೂರಿಗೆ ಪ್ರಥಮ ಸಲ ಹೋದಾಗ ತೆಂಗಿನಮರಗಳಿಂದ ತುಂಬಿದ, ಹಸಿರುಗುಡ್ಡದ ನಡುವೆ ಹರಡಿದ್ದ ಊರನ್ನು ಕಂಡು ದಂಗಾದೆ. ಪ್ರಕೃತಿಯೊಂದಿಗಿನ ಒಡನಾಟ ಕಮಲಾಳ ಬಾಲ್ಯವನ್ನು ವೈವಿಧ್ಯಮಯಗೊಳಿಸಿದಂತೆ, ಶ್ರೀಮಂತಗೊಳಿಸಿದಂತೆ ಮನೆಯಲ್ಲಿಯ ಸುಸಂಸ್ಕೃತ ವಾತಾವರಣ ಅವಳ ಸದ್ಗುಣ, ಸದಾಚಾರಗಳಿಗೆ ನಾಂದಿ ಹಾಡಿತ್ತು. ಜೊತೆಗೆ ಅವಳಲ್ಲಿ ಪ್ರೋತ್ಸಾಹ, ಶಿಸ್ತು ತುಂಬಿದ ಅವಳ ತಾಯಿ ಗಿರಿಜಾಬಾಯಿ ಹಾಗೂ ನೈತಿಕ ಮೌಲ್ಯ, ವೈಚಾರಿಕತೆಗಳನ್ನು ತುಂಬಿದ ಅವಳ ಅಜ್ಜಿ ಬಾಳಿನುದ್ದಕ್ಕೂ ಬೆಳಕಾಗಿ ನಿಂತರು.

ಮಹಿಳೆಯರ ಉನ್ನತಿಗೆ ಶ್ರಮಿಸಿದ ರಾಮಕೃಷ್ಣ ಪರಮಹಂಸ, ವಿವೇಕಾನಂದರಂತಹ ಸಮಾಜ ಸುಧಾರಕರ ಪ್ರಯತ್ನಗಳು ಗಿರಿಜಾದೇವಿಯ ಮೇಲೆ ಬಹಳಷ್ಟು ಪ್ರಭಾವ ಬೀರಿದ್ದವು. ೧೯ನೆ ಶತಮಾನದ ಕೊನೆಯಲ್ಲಿ ಸಂಪ್ರದಾಯಸ್ಥ ಕುಟುಂಬದಲ್ಲಿ ಗಿರಿಜಾಬಾಯಿ ಜನಿಸಿದ್ದರೂ ಅವಳ ಮನಸ್ಸು ಆಧುನಿಕ ವಿಚಾರಗಳಿಗೆ ಮಿಡಿಯುತ್ತಿತ್ತು. ಜ್ಞಾನಾಕಾಂಕ್ಷೆ ಅವಳನ್ನು ಸುಮ್ಮನೆ ಕೂಡಿಸಲಿಲ್ಲ. ಗುರುಗಳನ್ನು ಹುಡುಕಿಕೊಂಡು ಹೋಗಿ ಅಕ್ಷರ ಕಲಿತಳು. ಬರೆಯುವುದನ್ನು ರೂಢಿಸಿಕೊಂಡಳು. ಹೊರಜಗತ್ತಿನ ಸಂಪರ್ಕ ಸಾಧಿಸಿದಳು. ಮೂಢ ನಂಬಿಕೆಗಳ ವಿರುದ್ಧ ಸಮರಸಾರಿದ್ದ ನವ ವಿಚಾರಧಾರೆಗೆ ತನ್ನನ್ನು ಒಡ್ಡಿಕೊಂಡಳು. ಆಗ ತಾನೆ ಪ್ರಖರಗೊಳ್ಳುತ್ತಿದ್ದ ಸ್ವಾತಂತ್ರ್ಯ ಆಂದೋಲನದಲ್ಲಿ ಗಿರಿಜಾಬಾಯಿ ಸಕ್ರಿಯಳಾದಳು. ತನಗೆ

ದೊರಕಲಾರದ ಶಾಲಾ-ಕಾಲೇಜು ಶಿಕ್ಷಣ ತನ್ನ ಮಗಳಿಗಾದರೂ ದೊರೆಯಲೆಂಬುದು ಗಿರಿಜಾಬಾಯಿಯ ಆಸೆಯಾಗಿತ್ತು. ಅದಕ್ಕಾಗಿಯೇ ಆಗ ಚಾಲ್ತಿಯಲ್ಲಿದ್ದ ಮನೆಪಾಠದ ಬದಲು ಕಮಲಾಳನ್ನು ಸೇಂಟ್ ಅನ್ನೆ ಕಾನ್ವೆಂಟಿಗೆ ಸೇರಿಸಿದಳು.

ಕಮಲಾಳ ತಂದೆ ಅನಂತಯ್ಯ ತನ್ನ ಹೆಂಡತಿ ಗಿರಿಜಾಬಾಯಿಗೆ ಸ್ವಾತಂತ್ರ್ಯ ಕೊಟ್ಟಿದ್ದ. ಅವಳ ವಿಚಾರಗಳನ್ನು ಗೌರವಿಸುತ್ತಿದ್ದ. ಬದಲಾಗುತ್ತಿರುವ ಜಗತ್ತಿನ ಜೊತೆ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಆದರೆ ಅಷ್ಟಾಗಿಯೂ ಕೂಡ ಸಂಪ್ರದಾಯದ ಬೇಲಿಯನ್ನು ಅವನಿಂದ ದಾಟಲಾಗಲಿಲ್ಲ. ತನ್ನ ಶ್ರೀಮಂತ ಗೆಳೆಯ ನಯಾಪಲ್ಲಿ ಸುಬ್ಬರಾವ್ ಮಗ ಕೃಷ್ಣರಾವ್‌ನೊಂದಿಗೆ ಕಮಲಾಳ ವಿವಾಹವನ್ನು ಗೊತ್ತುಪಡಿಸಿದಾಗ ಕಮಲಾ ಏನೂ ಅರಿಯದ ಮುಗ್ಧೆ. ಆಕೆಯ ವಯಸ್ಸು ಆಗ ಕೇವಲ ಹನ್ನೊಂದು. ಆಪತ್ತುಗಳು ಬರುವಾಗ ಒಂದುಗಟ್ಟಲೆ ಬರುತ್ತವೆಂದು ಹೇಳುತ್ತಾರೆ. ಕಮಲಾಳ ಬದುಕಿನಲ್ಲಿ ಹಾಗೆಯೇ ಆಯಿತು. ಅವಳ ಅಪ್ಪ ಅನಂತಯ್ಯ ಏಕಾಏಕಿ ತೀರಿಕೊಂಡ. ಕಷ್ಟಗಳ ಸರಮಾಲೆ ಗಿರಿಜಾಬಾಯಿಯ ಕೊರಳಿಗೆ ಬಿದ್ದಿತು. ಬಹುಶಃ ಈ ಕಷ್ಟ-ಕಾರ್ಪಣ್ಯದ ಕಾರಣಕ್ಕಾಗಿಯೇ ಅವಳು, ಗಂಡ ನಿಶ್ಚಯಿಸಿ ಹೋಗಿದ್ದ ಕೃಷ್ಣರಾವ್‌ನೊಂದಿಗಿನ ಕಮಲಾಳ ಮದುವೆಯನ್ನು ನಡೆಯಲು ಬಿಟ್ಟಳು.

ಇನ್ನೂ ಆಟವಾಡುವ ಚಿಕ್ಕ ಬಾಲಕಿಯಾಗಿದ್ದ ಕಮಲಾ ಗಂಡನ ಮನೆಗೆ ಟೆನ್ನಿಸ್, ಬ್ಯಾಡ್ಮಿಂಟನ್ ಆಟಗಳಿಗೆಂದು, ಗ್ರಂಥಾಲಯದ ಪುಸ್ತಕ ಓದುವುದಕ್ಕೆಂದು ಹೋಗುತ್ತಿದ್ದಳು. ತನಗಿಂತ ನಾಲ್ಕುವರ್ಷ ದೊಡ್ಡವನಾಗಿದ್ದ, ಸ್ವಾತಂತ್ರ್ಯ-ಸತ್ಯಾಗ್ರಹ ಎಂದೆಲ್ಲ ಆಸಕ್ತಿ ಹೊಂದಿದ್ದ ಕೃಷ್ಣರಾವ್‌ನನ್ನು ಗಂಡನಾಗಿ ಒಪ್ಪಿಕೊಳ್ಳುವುದರಲ್ಲಿ ಕಮಲಾಗೆ ಅಷ್ಟೇನೂ ವಿರೋಧವಿರಲಿಲ್ಲ. ಆದರೆ ವಿಧಿಯಾಟವೆನ್ನುವುದು ಬೇರೆಯಾಗಿತ್ತು. ಅವರು ಮದುವೆಯಾಗಿ ವರ್ಷವೂ ದಾಟಿರಲಿಲ್ಲ. ಕೃಷ್ಣರಾವ್ ತೀರಿಕೊಂಡು ಬಿಟ್ಟ. ಕಮಲಾ ಇನ್ನೂ ಆಟ-ಅಭ್ಯಾಸದಲ್ಲಿ ಮೈಮರೆತ ಹುಡುಗಿ. ತವರುಮನೆಯಲ್ಲಿ ಓದುತ್ತಿದ್ದಳು. ಅಧಿಕೃತವಾಗಿ ಗಂಡನ ಮನೆಗೆ ಇನ್ನೂ ಹೆಜ್ಜೆ ಹಾಕಿರಲಿಲ್ಲ. ಗಂಡನ ಸಾವಿನ ಸುದ್ದಿ ಆಕೆಗೆ ಬರಸಿಡಿಲಿನಂತೆ ಎರಗಿತ್ತು.

ಗಿರಿಜಾಬಾಯಿ ಮಾತ್ರ ಎದೆಗುಂದಲಿಲ್ಲ. ಆಗಿನ ಕಾಲಕ್ಕೆ ವಿಧವೆಯವೆಯರ ಮೇಲೆ ವಿಧಿಸಲಾಗುತ್ತಿದ್ದ ಅಮಾನುಷ ಕಟ್ಟಳೆಗಳ ವಿರುದ್ಧ ಸಮರ ಸಾರಿದಳು. ಮಗಳಿಗೆ ಓದು ಮುಂದುವರೆಸಲು ಹೇಳಿದಳು. ಕೃಷ್ಣರಾವ್‌ನ ಮನೆಯವರೂ ಕೂಡ ಒಳ್ಳೆಯವರಾಗಿದ್ದುದು ಬಾಲವಿಧವೆ ಕಮಲಾಗೆ ವರದಾನವಾಯಿತು. ಅವರು ಅವಳನ್ನು ತಮ್ಮ ಮಗಳಂತೆ ಭಾವಿಸಿದ್ದರು. ಸೊಸೆಯನ್ನು ಹೆಚ್ಚಿನ ಓದಿಗೆಂದು ವಿದೇಶಕ್ಕೆ ಕಳಿಸುವ ಆಲೋಚನೆ ಕೂಡ ಅವರಿಗಿತ್ತು. ಆದರೆ ಅಷ್ಟರಲ್ಲಿ ಮಗನ ದುರ್ಮರಣ ದುಃಸ್ವಪ್ನದಂತೆ ಎರಗಿತ್ತು...

ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದ ಅನಿಬೆಸೆಂಟ್ ಮಂಗಳೂರಿಗೆ ಭೇಟಿಕೊಟ್ಟದ್ದು ಗಿರಿಜಾಬಾಯಿಯ ಮೇಲೆ ಬಹಳಷ್ಟು ಪರಿಣಾಮ ಮಾಡಿತೆಂದು ಹೇಳಬೇಕು. ಹತ್ತು ವರ್ಷ ವಯಸ್ಸಿನ ಕಮಲಾಳನ್ನು ಅನಿಬೆಸೆಂಟ್ ಹತ್ತಿರ ಕರೆದೊಯ್ದಿದ್ದಳು. ಕಮಲಾ ಅವಳ ತರಹ ಆಗಬೇಕೆಂದು ಆಶಿಸಿದ್ದಳು. ದೊಡ್ಡ ದೊಡ್ಡ ಸಾಧಕಿಯರ ಬಗ್ಗೆ, ಧೀರೋದಾತ್ತ ಮಹಿಳೆಯರ ಬಗ್ಗೆ ತಾಯಿ ಮಗಳಿಗೆ ಪಾಠ ಮಾಡುತ್ತಿದ್ದಳು. ಎಂತಹ ಸಂದರ್ಭದಲ್ಲಿಯೂ ಮಹಿಳೆ

ಎದೆಗುಂದದೆ ಇರಬೇಕೆಂದು ಅಪೇಕ್ಷಿಸಿದಳು. ಕತ್ತಲೆಯ ಬಗೆಗೆ ಹೆಣ್ಣುಮಕ್ಕಳಲ್ಲಿ ಸಾಮಾನ್ಯವಾಗಿರುವ ಭಯವನ್ನು ಅವಳು ದೂರಮಾಡಿದಳು. ಕಮಲಾ ಇನ್ನೂ ಚಿಕ್ಕ ಹುಡುಗಿಯಾಗಿದ್ದಾಗ ಒಬ್ಬ ಗಂಡಸು ಅವಳ ಬೆನ್ನುಹತ್ತಿದ್ದ. ತನ್ನನ್ನು ಬೆನ್ನಟ್ಟಿ ಬರುವವನನ್ನು ಪುಸಲಾಯಿಸುವಂತೆ ಸುಮ್ಮನಿದ್ದ ಆಕೆ ಅವನಿಗೆ ಉತ್ತೇಜನ ಕೊಡುವಂತೆ ವರ್ತಿಸಿ ನಂತರ ಪೋಲೀಸರ ಸಮೀಪಕ್ಕೆ ಕರೆದೊಯ್ದು ಚೀರಿ, ಗಲಾಟೆಮಾಡಿ ಆ ರಸ್ತೆ ರೋಮಿಯೋನನ್ನು ಬಂಧಿಸುವಂತೆ ಮಾಡಿದಳು. ಕಮಲಾ ಅದನ್ನು ತಾಯಿಗೆ ಹೇಳಿದಾಗ ಆಕೆ ಮಗಳ ಧೈರ್ಯವನ್ನು ಕೊಂಡಾಡಿದಳು. ಬೇರೆ ಯಾರಾದರೂ ಆಗಿದ್ದರೆ ಹುಡುಗಿಯಾಗಿ ಅಂತಹ ಆಪತ್ತನ್ನು ಎದುರು ಹಾಕಿಕೊಳ್ಳುವುದರಲ್ಲಿ ಅರ್ಥವೇನಿದೆಯೆಂದು ಬಯ್ಯುತ್ತಿದ್ದರೇನೋ?...

ಕಮಲಾದೇವಿಯು ತನ್ನ ಬಾಲ್ಯದ ಬದುಕಿನಿಂದ ಬಹಳಷ್ಟನ್ನು ಕಲಿತಳೆಂದು ಹೇಳಬೇಕು. ಅವಳ ಅಪ್ಪ ಅನಂತಯ್ಯ ಒಂದು ಕಾಲನ್ನು ಸಂಪ್ರದಾಯದ ಗಾಲಿಯ ಮೇಲೆ ಮತ್ತೊಂದು ಕಾಲನ್ನು ಹೊಸ ಜಗತ್ತಿನ ಗಾಲಿಯ ಮೇಲಿಟ್ಟು ತನ್ನ ಕುಟುಂಬವನ್ನು ಹೊಸ ಬದುಕಿಗೆ ತೆರೆದಿದ್ದ. ಕಮಲಾಳಲ್ಲಿ ಆತ್ಮವಿಶ್ವಾಸ ಮೂಡಿಸಿದ್ದ. ಹೀಗಾಗಿ ಪ್ರಶ್ನಿಸುವ, ಹೊಸತನಕ್ಕೆ ಮಿಡಿಯುವ ಮನಸ್ಸನ್ನು ಅವಳು ರೂಢಿಸಿಕೊಂಡಳು. ಯಾರ ಅಭಿಪ್ರಾಯಕ್ಕೂ ಸೊಪ್ಪು ಹಾಕದೆ, ಯಾರ ಟೀಕೆ-ಟಿಪ್ಪಣಿಗೂ ಮಣಿಯದೆ ನಿರಾತಂಕವಾಗಿದ್ದ ಅಜ್ಜಿಯಿಂದಲೂ ಕಮಲಾ ಪ್ರೇರಣೆ ಪಡೆದಿದ್ದಳು. ಅಜ್ಜಿಯಂತೆ ತಾಯಿ ಗಿರಿಜಾದೇವಿಯು ಕೂಡಾ ಕಮಲಾಳ ಬದುಕನ್ನು ರೂಪಿಸಲು ಹೆಣಗಿದರು. ಅರ್ಥಹೀನ ಸಾಮಾಜಿಕ ನಂಬಿಕೆಗಳನ್ನು ಗಿರಿಜಾಬಾಯಿ ತಿರಸ್ಕರಿಸಿದರು. ಶಿಕ್ಷಣದ ಜೊತೆಗೆ ಆಟ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಮಲಾ ಭಾಗಿಯಾಗಿರುವಂತೆ ನೋಡಿಕೊಂಡರು. ಮಗಳನ್ನು ಸೇವಾ ಸದನ ಸಂಸ್ಥೆಗೆ ಕರೆದೊಯ್ದು ಪರಿಚಯಿಸಿದರು. ಅಲ್ಲಿ ಅನೇಕ ಮಹಿಳೆಯರ ಅಭಿವೃದ್ಧಿಗೆ ಗಿರಿಜಾಬಾಯಿ ಸ್ಫೂರ್ತಿಯಾಗಿದ್ದರು. ತಾಯಿಯ ಸಂಗೀತದ ಒಲವು ಕಮಲಾಳಲ್ಲೂ ಕೂಡಾ ಅಂತಹ ಅಪೇಕ್ಷೆ ಹುಟ್ಟಿಸಲು ಕಾರಣವಾಗಿ ಅವಳ ಜೀವನದಲ್ಲಿ ಶಾಂತಿ-ಸಮಾಧಾನ ತಂದುಕೊಟ್ಟಿತು.

ಬಾಲ್ಯದಲ್ಲಿಯೇ ತಂದೆಯ ಸಾವು ಕಮಲಾಳಲ್ಲಿ ಎಂದೆಂದೂ ಮಾಯಲಾಗದ ಗಾಯಮಾಡಿತು. ಅಪ್ಪ ಆಕೆಯನ್ನು ಪ್ರೀತಿಯಿಂದ ಬೆಳೆಸಿದ್ದ. ಎತ್ತಿ ಆಡಿಸಿದ್ದ. ಹುರುಪು-ಹುಮ್ಮಸ್ಸು ತುಂಬಿದ್ದ. ಆದರೆ ಒಮ್ಮಿಂದೊಮ್ಮೆಲೆ ಇಲ್ಲವಾದ. ಬದುಕಿನ ಎಲ್ಲ ಅನುಕೂಲಗಳು ಒಮ್ಮೆಲೆ ನಿಂತುಹೋದವು. ಅನಾನುಕೂಲಗಳು ದಡಕ್ಕನೆ ಎದ್ದು ನಿಂತವು. ನೆರೆಹೊರೆಯವರು, ಗೆಳತಿಯರು ಎಲ್ಲರೂ ದೂರವಾದರು. ಆ ಜೀವನ ತನಗೆ ಮತ್ತೆ ಎಂದೆಂದಿಗೂ ತಿರುಗಿ ಬರುವುದಿಲ್ಲವೆಂಬುದರ ಅರಿವು ಉಂಟಾಯಿತು. ಹಿಗಾಗಿ ತನ್ನ ಜೀವನವನ್ನು ಬೇರೆಯವರು ಕಟ್ಟಿಕೊಡುವುದು ಸಾಧ್ಯವಿಲ್ಲ. ತಾನು ಮಾತ್ರ ಕಟ್ಟಬಲ್ಲೆ . ತಾನು ಮಾತ್ರವೇ ತನ್ನ ಗೌರವಯುತ ಜೀವನಕ್ಕೆ ಕಾರಣಳು. ಓದಿ ವಿದ್ಯಾವಂತಳಾಗಿ ಅದನ್ನು ರೂಪಿಸಿಕೊಳ್ಳಬೇಕೆಂಬ ಹಂಬಲ ತಂತಾನೇ ಹುಟ್ಟಿಕೊಂಡಿತು.

– ಅನು : ಬಸು ಬೇವಿನಗಿಡದ

(ನ್ಯಾಷನಲ್ ಬುಕ್‌ಟ್ರಸ್ಟ್ ಪ್ರಕಟಿಸಿರುವ ಪುಸ್ತಕದ ಆಯ್ದ ಭಾಗ)

* * *

ಭಾರತಕ್ಕೊಂದು ಪರ್ಯಾಯ ಅಭಿವೃದ್ಧಿ ಮಾರ್ಗ

– ಡಾ. ಕೆ.ಅಮ್ಮಣ್ಣಯ್ಯ

(ಡಾ.ಕೆ.ಅಮ್ಮಣ್ಣಯ್ಯ ಒಬ್ಬ ಅರ್ಥಶಾಸ್ತ್ರಜ್ಞರು. ಸಿಂಡಿಕೇಟ್ ಬ್ಯಾಂಕಿನಲ್ಲಿ ಉನ್ನತ ಹುದ್ದೆಯಲ್ಲಿದ್ದವರು. ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷರಾಗಿದ್ದವರು. ಜೂನ್ ೧೫. ೨೦೦೯ರ ಭವನ್ಸ್ ಜರ್ನಲ್‌ನಲ್ಲಿ ಅವರು ಬರೆದಿರುವ ಒಂದು ಲೇಖನ ಭಾರತಕ್ಕೆ ಅಭಿವೃದ್ಧಿ ಮಾರ್ಗೋಪಾಯದ ಬಗ್ಗೆ ಅನೇಕ ಮಹತ್ವದ ಸಂಗತಿಗಳನ್ನು, ಸಲಹೆಗಳನ್ನು, ಒಳಗೊಂಡಿದೆ. ಈ ಲೇಖನದಲ್ಲಿ ಎಲ್ಲೂ ಗಾಂಧಿಜಿಯ ಹೆಸರು ಇಲ್ಲ. ಉಲ್ಲೇಖವಿಲ್ಲ. ಆದರೆ ಅವರು ಹೇಳುವುದರಲ್ಲಿ ಹೆಚ್ಚು ಮಾತು ಗಾಂಧೀ ಚಿಂತನೆಯೇ ಎಂಬುದು ಸ್ಪಷ್ಟ. ತಥ್ಯಾಂಶ ಅದೇ. ಲೇಖನದ ಸಾರಾಂಶಗಳನ್ನು ಮನನಮಾಡುವುದು ಲಾಭದಾಯಕ. ನಮ್ಮ ನಾಡಿನ ಆಡಳಿತ ಸೂತ್ರಧಾರರೂ ಇತ್ತ ಗಮನ ಹರಿಸಲೇಬೇಕು. ಸಾಮಾನ್ಯ ಜನತೆಗೂ ಇದು ದಾರಿ ತೋರಬಲ್ಲಂಥ ವಿಚಾರವೇ. – ಅನುವಾದಕ)

ನಾವೀಗ ಜಾಗತಿಕ ಸಂಕಷ್ಟದಲ್ಲಿ ಸಿಲುಕಿದ್ದೇವೆ. ಜಗತ್ತಿನ ಅರ್ಥವ್ಯವಸ್ಥೆ ಏರುಪೇರಾಗಿದೆ. ಅದರ ಕರಿನೆರಳು ಭಾರತದ ಅರ್ಥವ್ಯವಸ್ಥೆಯನ್ನು ಕಂಗೆಡಿಸುತ್ತಿದೆ. ಲೆಕ್ಕವಿಲ್ಲದಷ್ಟು ಆರ್ಥಿಕ ಸಮಸ್ಯೆಗಳು ದೇಶವನ್ನು ಬಾಧಿಸುತ್ತಿವೆ. ಬೆಳವಣಿಗೆಯ ಪ್ರಮಾಣ ಕುಂಠಿತ, ಹಣಕಾಸಿನ ಖೋತಾ ಹೆಚ್ಚಳ, ಆದಾಯ ಖೋತಾ, ವ್ಯಾಪಾರದಲ್ಲಿ ಖೋತಾ, ನಿರುದ್ಯೋಗ ಹೆಚ್ಚಳ, ಉದ್ಯೋಗ ನಷ್ಟ, ಸಾಂಸ್ಕೃತಿಕವಾಗಿ ಬೇರುಗಳ ನಷ್ಟ, ರಾಜಕೀಯದಲ್ಲಿ ಭ್ರಷ್ಟಾಚಾರದ ಹುತ್ತ. ನಾವು ಅನ್ಯ ಸಾಂಸ್ಕೃತಿಕ ಹಿನ್ನೆಲೆಯ ಅಭಿವೃದ್ಧಿ ಮಾರ್ಗವನ್ನು ಅನುಸರಿಸಿದೆವು. ಅದು ಭೋಗ ಪ್ರದಾನ ಮಾರ್ಗ ಅದರಿಂದ ನಿರೀಕ್ಷಿತ ಫಲ ಸಿಗುತ್ತಿಲ್ಲ. ಭಾರತೀಯ ಸಂಸ್ಕೃತಿ ಒಂದು ಸಮನ್ವಯದ ಅಭಿವೃದ್ಧಿ ಮಾರ್ಗವನ್ನು ರೂಪಿಸಿಕೊಂಡಿತ್ತು. ಲೌಕಿಕ ಹಾಗೂ ಪಾರಲೌಕಿಕ ಎರಡರ ಸಂಯೋಜಿತ ಅಭಿವೃದ್ಧಿಮಾರ್ಗ. ಅದೇ ಪುರುಷಾರ್ಥ ಕಲ್ಪನೆ. ಬಾಳಿಗೆ ಅರ್ಥ–ಕಾಮ ಅಗತ್ಯ. ಅವನ್ನು ಧರ್ಮ ಮೋಕ್ಷಗಳಿಗೆ ಜೋಡಿಸಲಾಗಿತ್ತು. ಭಾರತ ಕಟ್ಟಿಕೊಳ್ಳಬೇಕಾದುದು ಈ ನಾಲ್ಕು ಪುರುಷಾರ್ಥಗಳ ಮೇಲೆ ರೂಪುಗೊಂಡ ವ್ಯವಸ್ಥೆಯನ್ನು. ಕಮ್ಯೂನಿಸಂ ಹಿನ್ನಡೆ, ಬಂಡವಾಳಶಾಹಿ ಯಶಸ್ಸುಗಳ ಹಿನ್ನೆಲೆಯಲ್ಲಿ ಈ ಮೂರನೆಯ ದಾರಿಯ ಅನ್ವೇಷಣೆ ಅಗತ್ಯವಾಗಿದೆ.

ಬಂಡವಾಳಶಾಹಿ ಬದುಕಲಾರದು ಎಂಬ ಹಲವು ಚಿಂತಕ ಭವಿಷ್ಯವಾಣಿ ದಿಟವಾಗುತ್ತಿದೆ. ಭಾರಿ ಭಾರಿ ಹಣಕಾಸು ಸಂಸ್ಥೆಗಳು ದಿವಾಳಿ ಏಳುತ್ತಿವೆ. ೧೫೮ ವರ್ಷ ಬೆಳೆದಿದ್ದ ಅಮೇರಿಕನ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕು ಬಿದ್ದು ಹೋಯಿತು. ಅಮೇರಿಕದ ಹಲವಾರು ಆರ್ಥಿಕ ದೈತ್ಯ ಸಂಸ್ಥೆಗಳು ನೆಲಕಚ್ಚಿ ಜಗತ್ತನ್ನೆ ಅಲ್ಲಾಡಿಸುತ್ತಿವೆ. ಸಾವಿರಾರು ಕೋಟಿ ಮೊತ್ತದ ವ್ಯವಹಾರವಿದ್ದ ಸಂಸ್ಥೆಗಳಿಗೆ ಈಗ ಸಹಾಯಧನದ ಗಂಜಿ

ಹಾಕಬೇಕಾಗಿದೆ. ಜನರಲ್ ಮೋಟಾರ್ಸ್‌ನಂಥ ರಾಕ್ಷಸಗಾತ್ರದ ಉದ್ಯಮಗಳು, ಅದೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಂಸ್ಥೆಗಳು ಸೋತು ಸುಣ್ಣವಾಗಿ ಬಂಡವಾಳಶಾಹಿಯ ಚರಮಗೀತೆಯನ್ನು ಹಾಡುತ್ತಿವೆ. ಭಾರತದಲ್ಲೂ ಇತ್ತೀಚಿಗೆ ಅತಿಶ್ರೇಷ್ಠವೆನಿಸಿದ್ದ ಕಂಪನಿಗೆ ಎಂಥ ದುರ್ಗತಿ ಬಂತು. ಅದೇ ಸತ್ಯಂ ಕಂಪ್ಯೂಟರ್ ಸಂಸ್ಥೆ!

ಕಮ್ಯೂನಿಸಂ-ಬಂಡವಾಳಶಾಹಿ ಎರಡೂ ಸೋತಿವೆ. ಅಂತೆಯೆ ಬೇರೊಂದು ಅಭಿವೃದ್ಧಿ ಮಾರ್ಗೋಪಾಯ ಅಗತ್ಯವಾಗಿದೆ. ಈಗಿನ ವ್ಯಾಪಾರೋದ್ಯಮ ವ್ಯವಹಾರವೆಲ್ಲವೂ ಹಳೆಯ ವಸಹಾತುವಾದದ ಪಳೆಯುಳಿಕೆಗಳೇ ಆಗಿವೆ. ಆ ವಸಹಾತುಕರಣ ಹಿಂದೆ ಜಗತ್ತನ್ನು ಹಿಂಡಿ ಹಾಕಿತ್ತು. ಹಳೆಯ ರೋಗ ಹೊಸ ಹೆಸರಿನಲ್ಲಿ ಬಂದಿದೆ, ಅಂತೆಯೆ ಹೊಸ ಚಿಂತನೆ ಅಗತ್ಯವಾಗಿದೆ. ಹೆಚ್ಚು ಮಾನವೀಯವೂ, ಶೋಷಣಾರಹಿತವೂ ಮತ್ತು ಆಧ್ಯಾತ್ಮಿಕ ಉನ್ನತಿಕಾರಕವೂ ಆದ ಮೂರನೆಯ ಮಾರ್ಗ ಬೇಕಾಗಿದೆ.

ನಮಗೀಗ ಬೇಕಾದುದು ಪಾಶ್ಚಿಮಾತ್ಯವಲ್ಲದ ಆಧುನಿಕತೆ. ಪಶ್ಚಿಮದ ರೀತಿ ಅಪಾಯಕ್ಕೆ ಈಡುಮಾಡುದಂಥದು. ನಮ್ಮ ನಾಡಿನ ಧರ್ಮದ ಮೇಲೆ ನಿಂತ, ನಮ್ಮ ಮಣ್ಣಿಗೆ ಪ್ರಸ್ತುತವಾದ, ಭಾರತದ ಹಿನ್ನೆಲೆಗೆ ಪರಿಸ್ಥಿತಿಗೆ ಅನುಗುಣವಾದ ಅಭಿವೃದ್ಧಿ ವ್ಯವಸ್ಥೆ ಬೇಕಾಗಿದೆ.

೧೯೬೪, ಮೇ ೨೫ರಂದು ಪಂಡಿತ ನೆಹರೂ ಶ್ರೀಮನ್ನಾರಾಯಣರ ಒಂದು ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ ಹೇಳಿದ್ದರು. "ಭಾರತದಲ್ಲಿ ತಂತ್ರಜ್ಞಾನದ ಲಾಭ ಪಡೆದು ಕೃಷಿ-ಕೈಗಾರಿಕೆ ಎರಡರ ಉತ್ಪಾದನೆಯನ್ನೂ ಹೆಚ್ಚಿಸಬೇಕಾಗಿದೆ. ಆದರೆ ಹಾಗೆ ಮಾಡುವಲ್ಲಿ ಮೂಲ ಉದ್ದೇಶವನ್ನೂ ಮರೆಯುವಂತಿಲ್ಲ. ಅದೆಂದರೆ ವ್ಯಕ್ತಿಯ ಗುಣಾತ್ಮಕತೆ ಮತ್ತು ಅದಕ್ಕೆ ಆಧಾರವಾದ ಧರ್ಮ ಪರಿಕಲ್ಪನೆ."

ಆದ್ದರಿಂದ ನಾವೀಗ ಧರ್ಮದ ಅಡಿಪಾಯವುಳ್ಳ ಹಾಗೂ ಇತರ ದೇಶಗಳು ಎಡವಿದ್ದನ್ನು ನಿವಾರಿಸಿಕೊಂಡ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ.

ಬಂಡವಾಳಶಾಹಿಯ ಭದ್ರಕೋಟೆ ಅಮೇರಿಕಾ. ಅಲ್ಲೆ ಹುಟ್ಟಿತು ಅವನತಿಯ ದಳ್ಳುರಿ. ಅದು ಈಗ ಯೂರೋಪಿಗೆಲ್ಲ ಆವರಿಸಿದೆ. ಜಗತ್ತಿಗೆ ಬಿಸಿ ಮುಟ್ಟಿಸುತ್ತಿದೆ. ಯಾವ ದೇಶವೂ ಹೊರತಾಗಿಲ್ಲ. ಭಾರತವೂ ತತ್ತರಿಸುತ್ತಿದೆ.

ಪಶ್ಚಿಮದ ಅಭಿವೃದ್ಧಿ ಮಾದರಿ ಪರಿಸರಕ್ಕೆ ಹಾನಿಕಾರಕ. ಸಾಮಾಜಿಕ ಬಾಂಧವ್ಯಗಳಿಗೆ ಬಾಧಕ. ವಿರಾಮ, ಕೌಟುಂಬಿಕತೆ, ಸಂವಾದ ಮಾನವ ಸಂಬಂಧ ಎಲ್ಲಕ್ಕೂ ಘಾತಕ ಪ್ರಚಾರ ಭೂತವನ್ನು ಎಬ್ಬಿಸಿ, ಲೌಕಿಕ ಆಸೆ ಆಮಿಷಗಳನ್ನು ಉಬ್ಬಿಸಿ, ಕೊಳ್ಳುಬಾಕತನವನ್ನು ಹಬ್ಬಿಸುತ್ತಿದೆ. ಭೂತಾಕಾರದ 'ಮಾಲ್'ಗಳು ಸಾಂಪ್ರದಾಯಿಕ ಅಂಗಡಿ ಮುಂಗಟ್ಟುಗಳನ್ನು ನೆಲೆತಪ್ಪಿಸುತ್ತಿವೆ. ವ್ಯಾಪಾರೀ ಮನೋಭಾವದ ಟಿ.ವಿ. ಎಲ್ಲ ಮಾನವೀಯ ಸಂಬಂಧಗಳನ್ನು ನಾಶಗೊಳಿಸುತ್ತಿದೆ.

ಸ್ವಾತಂತ್ರ್ಯಾನಂತರ ಭಾರತ ಇಬ್ಬಗೆಯ ಅಭಿವೃದ್ಧಿ ಮಾರ್ಗವನ್ನು ಹಿಡಿಯಿತು. ಎರಡರ ತತ್ವವೂ ಭಿನ್ನ. ಮೊದಲು ಪಂಚವಾರ್ಷಿಕ ಯೋಜನೆಗಳ ಸಮಾಜವಾದೀ ಕಲ್ಪನೆಯ ಮಾರ್ಗ, ಸಾರ್ವಜನಿಕ ಉದ್ಯಮಗಳು, ರಾಷ್ಟ್ರೀಕೃತ ಬ್ಯಾಂಕುಗಳು, ಇತ್ಯಾದಿ. ಅವು ರಾಷ್ಟ್ರದ ಸಂಪತ್ತನ್ನು ವೃದ್ಧಿಸುವುದೆಂದು ಭಾವಿಸಲಾಗಿತ್ತು. ಆದರೆ ಆದುದೇ ಬೇರೆ.

ನೆಚ್ಚಿದ ಎಮ್ಮೆ ಕೋಣನ್ನು ಈಯಿತು! ಸಾರ್ವಜನಿಕ ಉದ್ಯಮಗಳು ಭ್ರಷ್ಟತೆ, ಅದಕ್ಷತೆಗಳಿಗೆ ಬಲಿಯಾದವು. ೧೯೫೧-೧೯೯೦ರಲ್ಲಿ ಎಷ್ಟೋ ಅಭಿವೃದ್ಧಿ ಆಯಿತು ಎನ್ನಲಾದರೂ ಈ ವ್ಯವಸ್ಥೆ ಸೋತಿತು. ೧೯೯೧-೯೨ರಲ್ಲಿ ಬೇರೊಂದು ರೀತಿಯ ಮಾರ್ಗ ತೆರೆಯಿತು. ಜಾಗತೀಕರಣ, ಉದಾರೀಕರಣ, ಆರ್ಥಿಕ ಸುಧಾರಣೆಗಳ ಹುಯಿಲು! ಈಗಲೂ ಅದೇ ನಡೆದಿದೆ. ಸಮಾಜವಾದ ಹೋಯಿತು. ಬಂಡವಾಳಶಾಹಿ ಅಮರಿಕೊಂಡಿತು. ಈಗ ಎಲ್ಲೆಲ್ಲೂ ದುಡ್ಡಿನ ದಾಹ. ಹಣದೋಚುವುದೊಂದೇ ಗುರಿ. ಬಡವರ ಬಗ್ಗೆ ನಿರ್ಲಕ್ಷ್ಯ. ಸಣ್ಣ ಪುಟ್ಟ ಉದ್ದಿಮೆಗಳು, ವ್ಯಾಪಾರಗಳು ಭಾರಿ ಬಂಡವಾಳಶಾಹಿಗಳ ಮುಂದೆ ನಿಲ್ಲಲಾರದೆ ನಾಶವಾಗುತ್ತಿವೆ. ಎಲ್ಲೆಲ್ಲೂ ಸ್ಪರ್ಧೆ, ಪೈಪೋಟಿ! ಬಡಿದು ತಿನ್ನುವ ಬಕಾಸುರ ಧೋರಣೆ!

ಈ ರೀತಿಯಲ್ಲಿ ಸಾಧಿಸಿದ ಅಭಿವೃದ್ಧಿ ನಿಲ್ಲತಕ್ಕದೇ? ತಾಳತಕ್ಕದೇ? ಬಡವರ ಬಡತನ ಹೆಚ್ಚುತ್ತಿದೆ. ಬಲ್ಲಿದರ ಬಲ ಹೆಚ್ಚುತ್ತಿದೆ. ಎರಡೂ ಅತಿಗಳ ನಡುವೆ ದೇಶ ನಲುಗುತ್ತಿದೆ. ಇದು ನಿಜವಾದ ಅಭಿವೃದ್ಧಿಯೇ? ಈಗ ಎಲ್ಲವೂ ಆಮದಾಗುತ್ತಿದೆ. ವಿದೇಶೀ ಅಪಾಯಕಾರಿ ವಿಧಾನಗಳೂ ಆಮದಾಗುತ್ತಿವೆ. ಇತರ ದೇಶಗಳ ಹೊಲಸೆಲ್ಲ ನಮ್ಮಲ್ಲಿಗೂ ಹರಿದು ಬರುತ್ತಿದೆ. ಆರ್ಥಿಕ ಹಿನ್ನಡೆಯೂ ಅಂಥ ಒಂದು ಹೊಲಸು. ಅದೆಲ್ಲವನ್ನು ತಾಳಲಾರದೆ ಭಾರತ ನಡುಗುತ್ತಿದೆ.

ಎಲ್ಲೆಲ್ಲೂ ಉದ್ಯೋಗ ಕಡಿತ. ಎಲ್ಲ ಕ್ಷೇತ್ರಗಳಲ್ಲೂ ರಫ್ತು ಇಳಿಮುಖ. ಹಣಕಾಸು ಕೊರತೆ ಹೆಚ್ಚುತ ಆತಂಕ. ಆರ್ಥಿಕವಾಗಿ ಎಲ್ಲೆಡೆ ಹಿಂಜರಿತ. ಇದು ನಮ್ಮ ಯೋಜನೆ, ನಮ್ಮ ಅಭಿವೃದ್ಧಿ ಚಿಂತನೆಗಳಲ್ಲಿ ಹೊಸ ಮಾರ್ಗಾನ್ವೇಷಣೆಯ ಅಗತ್ಯವನ್ನು ಬೊಟ್ಟುಮಾಡಿ ತೋರಿಸುತ್ತಿದೆ. ಕೇಂದ್ರಿಕೃತ ವ್ಯವಸ್ಥೆ ಬೇಕು ಎನಿಸುತ್ತದೆ.

ಮನುಷ್ಯನಿಗೆ ತನ್ನ ಶರೀರವೇ ಅತ್ಯಂತ ದೊಡ್ಡ ಆಸ್ತಿ. ಶರೀರಕ್ಕೆ ದುಡಿಮೆ ಕೊಟ್ಟರೆ, ಉದ್ಯೋಗ ಕೊಟ್ಟರೆ, ಬಾಳು ಸುಮುಖಿ. ಉದ್ಯೋಗವೊಂದೇ ಜೀವನಕ್ಕೆ ದಾರಿ. ಅಂತೆಯೆ ಜನರನ್ನು ದುಡಿಮೆಗೆ ತೊಡಗಿಸಬೇಕಾಗಿದೆ. ದೇಹ ಪರಿಶ್ರಮದ ಪೂರ್ಣ ಉಪಯೋಗ ಆಗಬೇಕಾಗಿದೆ. ಅದಕ್ಕೆ ತಕ್ಕಂತೆ ಉದ್ಯೋಗವಕಾಶ ಹೆಚ್ಚುವಂತೆ ಅಭಿವೃದ್ಧಿ ಮಾರ್ಗವನ್ನು ರೂಪಿಸಬೇಕಾಗಿದೆ.

ಜಿ.ಡಿ.ಪಿ (ಒಟ್ಟು ಉತ್ಪಾದನೆ) ಕೊಳ್ಳುಬಾಕತನಗಳು ಪ್ರಧಾನವಾದ ಅಭಿವೃದ್ಧಿಮಾರ್ಗವನ್ನು ತೊರೆದು ಉದ್ಯೋಗ-ಉತ್ಪಾದನೆ ಪ್ರಧಾನವಾದ ವ್ಯವಸ್ಥೆಯನ್ನು ಯೋಚಿಸಬೇಕಾಗಿದೆ. ಅದಕ್ಕಾಗಿ ಈಗ ಒತ್ತು ಕೊಡಬೇಕಾದುದು ಕೃಷಿ, ಉದ್ಯಮ, ಸಾರಿಗೆ, ವ್ಯವಸ್ಥೆ, ಗಣಿಗಾರಿಕೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಕೃಷಿಯೇತರ ಕಾರ್ಯಗಳು ಇತ್ಯಾದಿಗಳ ಮೇಲೆ. ಎಲ್ಲದರಲ್ಲೂ ಮಾನವ ಶ್ರಮವನ್ನು ಹೆಚ್ಚು ಬಳಸಿಕೊಳ್ಳುವಂತಿರಬೇಕು. ದುಡಿಯ ಬಯಸುವ ಎಲ್ಲರಿಗೂ ದುಡಿಮೆ ಸಿಗಬೇಕು. ಉದ್ಯೋಗಗಳನ್ನು ಹೆಚ್ಚಿಸುವುದು ಇನ್ನೊಂದು ಮುಖ್ಯ ಉದ್ದೇಶವಾಗಬೇಕು. ಜನ ಸಮುದಾಯ ದುಡಿಮೆ ಪಡೆಯಬೇಕು.

ಗ್ರಾಮೀಣ ಭಾರತದ ಪರಿಸ್ಥಿತಿಗೆ ಅನುಗುಣವಾಗಿ ಅಲ್ಲಿ ಶಿಕ್ಷಣ, ಆರೋಗ್ಯ, ಇತರ ಸಾರ್ವಜನಿಕ ಸೇವಾರಂಗಗಳಲ್ಲಿ ಉದ್ಯೋಗವಕಾಶಗಳನ್ನು ಹೆಚ್ಚಿಸಬಹುದು.

೨೮ನೇ ಪುಟ ನೋಡಿ...

ಆದರ್ಶ ಶಿಕ್ಷಕ ಹೀಗಿರಬೇಕು

– ವಿನೋಬಾ

ಗಾತುವಿತ್

ತ್ವಂ ನೊ ಅಸ್ಯಾ ಅಮತೇರೂತ ಕ್ಷುಧಃ ಅಭಿಶಸ್ತೇರವ ಸ್ಪೃಧಿ
ತ್ವಂ ನ ಊತಿ ತವ ಚಿತ್ರಯಾ ಧಿಯಾ ಶಿಕ್ಷಾ ಶಚಿಷ್ಠ ಗಾತುವಿತ್ (೮.೮.೯)

ಹೇ ಶಕ್ತಶಾಲಿ ಮಾರ್ಗದರ್ಶಕನೇ, ನಿನ್ನ ರಕ್ಷಣೆ ಮತ್ತು ಬಹುವಿಧ ಧ್ಯಾನ ಶಕ್ತಿಯಿಂದ ನಮಗೆ ಉತ್ತಮ ಶಿಕ್ಷಣ ಕೊಡು ನಮ್ಮನ್ನು ಅಜ್ಞಾನ ಹಸಿವು ಮತ್ತು ವ್ಯಾಧಿಯಿಂದ ಮುಕ್ತಮಾಡು.

ಗುರುವನ್ನು ಸಂಬೋಧನೆ ಮಾಡುತ್ತ ಇದರಲ್ಲಿ ಪ್ರಾರ್ಥನೆ ಮಾಡಲಾಗಿದೆ. ಶಿಕ್ಷಕನಿಗೆ ಗಾತುವಿತ್ ಎಂಬುದು ವೇದದ ವಿಶೇಷ ಶಬ್ದವಾಗಿದೆ. ಗಾತುವಿತ್ ಎಂದರೆ ಮಾರ್ಗವನ್ನು ಹುಡುಕುವವನು. ಶಚಿಷ್ಠ ಎಂದರೆ ಶ್ರೇಷ್ಠ ಶಕ್ತಿಶಾಲಿ. ಶಿಕ್ಷಕನಿಗೆ ಅತ್ಯಂತ ಶಕ್ತಿಶಾಲಿ ಎಂದು ಕರೆಯಲಾಗಿದೆ. ಇದರ ಅರ್ಥ ಶಿಕ್ಷಕನ ಸ್ವತಂತ್ರ ಬುದ್ಧಿಯ ಪ್ರಭೆಯ ಗತಿಗೆ ಯಾವುದೇ ಆತಂಕವಿಲ್ಲ. ಆಕಾಶದಲ್ಲಿ ಹಂಸವು ಯಾವರೀತಿ ಮುಕ್ತವಾಗಿ ಹಾರುತ್ತದೋ ಅದೇ ರೀತಿ ಅದರ ವೇಗವೂ ಇರುತ್ತದೆ.

ಗರುಡ ಅಥವಾ ಶ್ಯೇನ ಪಕ್ಷಿಯಂತೆ ವಿಹಾರ ಶಿಕ್ಷಕನದಾಗಬೇಕು. ಮಾರ್ಗವನ್ನು ಹುಡುಕಿದ ಮೇಲೆ ಶಿಕ್ಷಕನಿಂದ ಏನು ಬಯಸಲಾಗುತ್ತದೆ ಎಂಬುದನ್ನೂ ಕೂಡ ಹೇಳಲಾಗಿದೆ. ಇಂದು ನಾವು ಯಾವ ವಿಷಯವನ್ನು ಬಯಸುತ್ತೇವೆಯೋ ಅದನ್ನೇ ಶಿಕ್ಷಕನಿಂದ ಕೇಳಲಾಗಿದೆ. ಮೂರು ಮಾತುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ– ಅಮತಿ, ಕ್ಷುಧ ಮತ್ತು ಅಭಿಶಸ್ತಿ ಅಂದರೆ ಅಜ್ಞಾನ, ಹಸಿವು ಮತ್ತು ರೋಗ.

ಈ ಮೂರು ವಿಷಯಗಳ ನಿರಸನ ಮಾಡುವ ಮಾರ್ಗತೋರಿಸುವ ಕೆಲಸವನ್ನು ಶಿಕ್ಷಕ ಮಾಡಬೇಕಿದೆ. ಅದಕ್ಕಾಗಿ ಶಿಕ್ಷಕನು ಶಚಿಷ್ಠನಾಗಿರಲೇಬೇಕು. ಶಿಕ್ಷಕನು ಜ್ಞಾನ–ವಿಜ್ಞಾನಗಳಲ್ಲಿ ಪ್ರವೀಣನಾದಾಗ ಮಾತ್ರ ಅಜ್ಞಾನವನ್ನು ದೂರ ಮಾಡಬಲ್ಲ. ಉತ್ಪಾದನೆಯ ಕಾರ್ಯದಲ್ಲಿ ಶಿಕ್ಷಕ ಬಲ್ಲವನಾಗಿದ್ದರೆ ಮಾತ್ರ ಹಸಿವೆಯ ನಿವಾರಣೆ ಮಾಡಬಲ್ಲ. ವಿವಿಧ ಪ್ರಕಾರದ ಸೃಷ್ಟಿ ವಿಜ್ಞಾನದಲ್ಲಿ ವಿಜ್ಞನಾದಾಗ ಮಾತ್ರ ರೋಗವನ್ನು ದೂರ ಮಾಡಬಲ್ಲ. ಚಿತ್ರವಿಚಿತ್ರ ಕಾಯಿಲೆಗಳಿವೆ. ಆದ್ದರಿಂದ ಚಿತ್ರ ವಿಚಿತ್ರ ಜ್ಞಾನಕೊಡಬೇಕು. ಸೃಷ್ಟಿಯ ಬಗ್ಗೆ ಇರುವ ವಿವಿಧ ಜ್ಞಾನ ವಿವಿಧ ಪ್ರಕಾರದ ರೋಗಗಳನ್ನು ಅಳಿಸಿಹಾಕುವುದು. ಉತ್ಪಾದನೆಯ ಕ್ಷಮತೆ ಹಸಿವನ್ನು ಅಳಿಸಿಹಾಕಿದರೆ ಬುದ್ಧಿ ಮತ್ತು ಚಿಂತನ ಶಕ್ತಿ ಅಜ್ಞಾನವನ್ನು ಅಳಿಸಿಹಾಕುವುದು.

ಇಂದು ಶಿಕ್ಷಣ ಸರ್ಕಾರದ್ದಾಗಿದೆ. ಆದ್ದರಿಂದ ಶಿಕ್ಷಕನಿಗೆ ಯಾವುದೇ ಪ್ರಕಾರದ ಸ್ವಾತಂತ್ರ್ಯವಿಲ್ಲ. ಆದರೆ ಶಿಕ್ಷಕ ಶ್ರೇಷ್ಠ ಶಕ್ತಿಶಾಲಿಯಾಗಲಿ ಎಂಬುದು ವೇದದ ಅಪೇಕ್ಷೆಯಾಗಿದೆ. ಶಿಕ್ಷಕನ ಬುದ್ಧಿ ಮತ್ತು ಅವನ ಪ್ರಭೆಯ ಮೇಲೆ ಯಾವುದೇ ಅಂಕುಶವಿರಕೂಡದು. ಹಂಸ ಪಕ್ಷಿಗೆ ಸಮಾನವಾಗಿ ಮುಕ್ತ ಮತ್ತು ಗರುಡನಿಗೆ ಸಮಾನನಾಗಿ ಹಾರುವ ಜ್ಞಾನ ವಿಜ್ಞಾನ ಸಂಪನ್ನ ಮತ್ತು

ಮಾರ್ಗದರ್ಶಕನಾಗಿ ಗುರು ಇರಬೇಕು.

ಹೇ ಶಕ್ತಿಶಾಲಿ, ಹೇ ಗಾತುವಿತ್, ನೀನು ನಮಗೆ ಉತ್ತಮ ಶಿಕ್ಷಣ ಕೊಡು. ನಿನ್ನ ಭಿನ್ನ ಭಿನ್ನ ಶಕ್ತಿಗಳನ್ನು ಎದುರಿಗೆ ತೋರಿಸು. ನಿನ್ನ ಬುದ್ಧಿಯನ್ನು ಪ್ರಕಟಗೊಳಿಸು. ನಿನ್ನ ಶಿಕ್ಷಣ ಶಕ್ತಿ ಉತ್ಪಾದನಾ ಶಕ್ತಿ ಎಲ್ಲವನ್ನೂ ತೋರಿಸು. ವಿವಿಧ ಪೀಡೆಗಳು ನಮ್ಮನ್ನು ನೋಯಿಸುತ್ತಿವೆ. ಅವುಗಳನ್ನು ನಿರಸನಗೊಳಿಸುವವನು ನೀನಲ್ಲದೆ ಬೇರೆ ಯಾರು ದೊರೆಯುತ್ತಾರೆ?

ನಾನು ಸಾಹಿತಿಯನ್ನು ದ್ರಷ್ಟಾ ಎಂದು ತಿಳಿಯುತ್ತೇನೆ. ಮಾರ್ಗದರ್ಶಕನೆಂದೂ ತಿಳಿಯುತ್ತೇನೆ. ಮಾರ್ಗ ತಿಳಿಸುವವನು, ಮಾರ್ಗ ಹುಡುಕುವವನು, ಮಾರ್ಗ ತೋರಿಸುವವನು, ಹೀಗೆ ಮೂರು ಪ್ರಕಾರದ ಜನರಿರುತ್ತಾರೆ. ಸಾಹಿತಿಗಳ ಗಣನೆ ಈ ಮೂರು ಪ್ರಕಾರದ ವರ್ಗಗಳಲ್ಲಿ ಬರುತ್ತದೆ. ಮಾರ್ಗವನ್ನು ಹುಡುಕುವವರು ಬಹುದೊಡ್ಡ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಮಾರ್ಗವನ್ನು ತಿಳಿದಂಥವರು ಎರಡನೇ ಪ್ರಕಾರದ ಸ್ಥಾನವನ್ನು ಹೊಂದಿದವರಾಗಿರುತ್ತಾರೆ. ಇನ್ನು ಮಾರ್ಗ ತೋರಿಸುವವರು ಮೂರನೇ ಸ್ಥಾನದವರಾಗಿರುತ್ತಾರೆ. ಋಗ್ವೇದದಲ್ಲಿ ಈ ಮೂರು ವರ್ಗದ ಶಿಕ್ಷಕರಿಗೆ ಗಾತುವಿತ್ ಎಂಬ ಶಬ್ದ ಬಂದಿದೆ.

* * *

೨೬ನೇ ಪುಟದಿಂದ... / ಪರ್ಯಾಯ ಅಭಿವೃದ್ಧಿ ಮಾರ್ಗ

ಮಾನವ ಶಕ್ತಿ, ಮಾನವ ಅಭಿವೃದ್ಧಿ ಇವು ಪ್ರಮುಖ ಲಕ್ಷ್ಯವಾಗಬೇಕು. ಎಲ್ಲರನ್ನೂ ಒಳಗೊಳ್ಳುವಂಥ ಅರ್ಥವ್ಯವಸ್ಥೆ ಗುರಿಯಾಗಬೇಕು.

ಕೃಷಿಯಂತೂ ಅತ್ಯಂತ ಮುಖ್ಯವಾದುದು, ಹಾಗೆಯೆ ಕೃಷಿಯೇತರ ಗ್ರಾಮೀಣ ಕಸುಬುಗಳು, ಹಳ್ಳಿಯ ಯುವಜನ ಕೃಷಿ ಅಧ್ಯಯನದ ನಂತರ ಕಲಿಕೆಯತ್ತ ತಿರುಗದೇ ಹಳ್ಳಿಗೇ ಮರಳಲು ಸಾಧ್ಯವಾಗುವಂತಹ ವ್ಯವಸ್ಥೆ ಅತ್ಯಗತ್ಯ. ಕೃಷಿ ಮತ್ತು ತತ್ಸಂಬಂಧಿತ ತಂತ್ರ-ಶಾಸ್ತ್ರಗಳಲ್ಲಿ ಗ್ರಾಮೀಣ ಯುವಕರಿಗೆ ತರಬೇತಿ ಕೊಡಲು ಗ್ರಾಮೀಣ ನಿರ್ವಹಣಾ ಶಾಸ್ತ್ರ ಕೇಂದ್ರಗಳನ್ನು ತೆರೆಯಬೇಕು. ಕೃಷಿ ಉತ್ಪನ್ನಗಳಿಗೆ ನ್ಯಾಯೋಚಿತ ಬೆಲೆ ದೊರಕುವಂತೆ ಆಡಳಿತ ನಿರ್ವಹಿಸಬೇಕು. ಕೃಷಿಕನಿಗೆ ತಕ್ಕ ಪ್ರತಿಫಲ ಸಿಗುವಂತಾಗಬೇಕು.

ಗ್ರಾಮೀಣ ಜನರ ಆರ್ಥಿಕ ಸ್ಥಿತಿ ಅರ್ಥಪೂರ್ಣವಾಗಬೇಕು. ನಾಡಿನ ಅರ್ಥ ವ್ಯವಸ್ಥೆಯಲ್ಲಿ ಕೃಷಿಕನಿಗೂ ಪಾಲು ದೊರೆಯಬೇಕು.

ಮಾನವನ ಅತಿಮುಖ್ಯ ಆಸ್ತಿ ಶರೀರ-ದೇಹ ಮತ್ತು ಮನಸ್ಸು. ಹೊಸ ಅಭಿವೃದ್ಧಿ ಮಾರ್ಗ ಈ ದೇಹ-ಮನಸ್ಸುಗಳ ಸಾಮರ್ಥ್ಯ-ಪರಿಶ್ರಮಗಳ ಸಂಪೂರ್ಣವೂ ಸಾರ್ಥಕವೂ ಆದ ಬಳಕೆಗೆ ಅವಕಾಶವೀಯುವಂತಿರಬೇಕು. ಅಭಿವೃದ್ಧಿ ಕಾರ್ಯದಲ್ಲಿ ಜನಸಮುದಾಯ ಭಾಗಿಯಾಗುವಂತಿರಬೇಕು. ಮಾನವ ಪರಿಶ್ರಮ ಆಧಾರಿತ ವಿಕೇಂದ್ರಿಕೃತ ಅರ್ಥವ್ಯವಸ್ಥೆ, ವ್ಯಕ್ತಿಯ ಅಭಿವೃದ್ಧಿ, ಉತ್ಪಾದನೆ, ಉದ್ಯೋಗ ಪ್ರಧಾನ ವ್ಯವಸ್ಥೆ ಇವುಗಳಿಂದಲೇ ವ್ಯಕ್ತಿಯ ಅಭಿವೃದ್ಧಿ ಹಗೂ ಜೊತೆಗೆ ರಾಷ್ಟ್ರದ ಅಭಿವೃದ್ಧಿ ಸಾಧ್ಯ. 'ಭಾರತಕ್ಕೆ ಇಂಥ ಸರ್ವವ್ಯಾಪಿ ಅರ್ಥವ್ಯವಸ್ಥೆಯನ್ನು ರೂಪಿಸಿ ನಡೆಸಬೇಕಾಗಿದೆ.'

– ಅನು: ನೀಲತ್ತಹಳ್ಳಿ ಕಸ್ತೂರಿ

* * *

ನನಗನ್ನಿಸಿದ್ದು

ತಂತ್ರಜ್ಞಾನ ಮತ್ತು ಯಂತ್ರಗಳ ಬಳಕೆಯ ಬಗ್ಗೆ ಅನೇಕ ಚರ್ಚೆಗಳು ನಡೆಯುತ್ತಲೇ ಇರುತ್ತವೆ. ಮತ್ತು ಚರ್ಚೆಗಳಾಗಿಯೇ ಉಳಿಯುತ್ತವೆ. ತಂತ್ರಜ್ಞಾನ ನಮ್ಮ ಬದುಕನ್ನು ಆವರಿಸುತ್ತಿರುವ ಪರಿ ನಮ್ಮ ಕಲ್ಪನೆಗೆ ಮೀರಿದ್ದಾಗಿದೆ. ನಮ್ಮ ತಂತ್ರಜ್ಞಾನ ವಿರೋಧಿ ಮಾತುಗಳೆಲ್ಲವೂ ಅರ್ಥಹೀನ ರೋದನದಂತೆ ಕಾಣುತ್ತಿವೆ. ಕೆಲವು ಸಲ ಹಾಸ್ಯಾಸ್ಪದವೂ ಅನಿಸುತ್ತದೆ. ತಂತ್ರಜ್ಞಾನ ತನ್ನಷ್ಟಕ್ಕೆ ತಾನು ಕೇಡುಮಾಡುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ತಂತ್ರಜ್ಞಾನದ ಯುಕ್ತ ಉಪಯೋಗದ ಬಗ್ಗೆ, ತಂತ್ರಜ್ಞಾನದಿಂದ ಸಮಾಜದಲ್ಲಿ ಉಂಟಾಗಬಹುದಾದ ಏರುಪೇರು ಮತ್ತು ಗೊಂದಲಗಳ ಬಗ್ಗೆ ಬಹಳಷ್ಟು ಜನ ಹೇಳಿದ್ದಾರೆ.

ನಿಜ! ತನ್ನ ಮಗಳು ಮೊಬೈಲ್‌ನಲ್ಲಿ ಯಾವುದೋ ತಮಗೆ ಅಪರಿಚಿತನಾದ ಹುಡುಗನೊಂದಿಗೆ ಮಾತನಾಡುವುದನ್ನು ಜೀರ್ಣಿಸಿಕೊಳ್ಳಲು ತಂದೆತಾಯಿಯರಿಗೆ ನಿಜವಾಗಿಯೂ ಕಷ್ಟವಾಗುತ್ತದೆ. ತಂತ್ರಜ್ಞಾನದ ಜೊತೆಗೆ ಬದಲಾಗುತ್ತಿರುವ ಜೀವನ ಕ್ರಮ, ನಂಬಿಕೆ, ಸನ್ನಿವೇಶ ಮತ್ತು ಮೌಲ್ಯಗಳನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಆಶ್ಚರ್ಯವೆಂದರೆ ಆಧುನಿಕ ತಾಂತ್ರಿಕ ಸಾಧನಗಳೆಲ್ಲಾ ಮಾನವನ ಜೀವನಕ್ರಮವನ್ನು ಒಂದಲ್ಲಾ ಒಂದು ರೀತಿ ಅಲುಗಾಡಿಸುತ್ತಿವೆ: ನಮ್ಮ ಆರಾಮ ವಲಯದಲ್ಲಿ ಗೊಂದಲವನ್ನುಂಟುಮಾಡುತ್ತವೆ.ಆಧುನಿಕ ತಂತ್ರಜ್ಞಾನವನ್ನು ಒಳಗೊಂಡ ಸಲಕರಣೆಗಳು ನಮ್ಮ ಕೆಂಗಣ್ಣಿಗೆ ಗುರಿಯಾಗುವುದು ಅವು ಮಾಡುವ ಕೆಲಸದಿಂದಲ್ಲ; ಅವುಗಳು ಉಪಯೋಗಿಸಲ್ಪಡುವ ರೀತಿಗಳಿಂದಾಗಿ ಎಂಬುದನ್ನು ನಾವು ಮರೆಯಬಾರದು. ಹಾಗಾದರೆ ನಮ್ಮ ಮೇಲೆ ಒತ್ತಡವನ್ನು ಉಂಟುಮಾಡುತ್ತಿರುವುದು ಏನು? ತಂತ್ರಜ್ಞಾನವೋ ಅಥವಾ ಅನಿವಾರ್ಯವಾಗಿ ನಾವು ಬದಲಾಯಿಸಿಕೊಳ್ಳಬೇಕಾದ ನಮ್ಮ ಜೀವನ ಕ್ರಮವೋ?

ಮೊನ್ನೆ ಸಮಾರಂಭವೊಂದರಲ್ಲಿ ಗಣ್ಯರೊಬ್ಬರು ಮೊಬೈಲ್‌ನ ಅವಾಂತರಗಳನ್ನು ವರ್ಣಿಸುತ್ತಾ ಹೇಗೆ ಎದುರಿಗಿರುವ ವ್ಯಕ್ತಿ ಮೊಬೈಲ್‌ಕರೆ ಬಂದಾಕ್ಷಣ ಗೌಣನಾಗಿಬಿಡುತ್ತಾನೆ ಎಂಬುದನ್ನು ಹೇಳುತ್ತಿದ್ದರು. ಹೌದು! ಆರಾಮವಾಗಿ ನಮ್ಮೊಡನೆ ಹರಟುತ್ತಿದ್ದ ನಮ್ಮ ಗೆಳೆಯ ಇದ್ದಕ್ಕಿದ್ದಹಾಗೆ ಸಂಪೂರ್ಣವಾಗಿ ನಮ್ಮನ್ನು ಕಡೆಗಣಿಸಿ ಹೇಳದೇ ಕೇಳದೆ ತನ್ನದೇ ಬೇರೊಂದು ಲೋಕಕ್ಕೆ ಹೋಗಿಬಿಡುತ್ತಾನೆ. ಎಂಥ ಶುದ್ಧ ಅವಮಾನ! ಅಷ್ಟೊತ್ತೂ ನಮ್ಮ ಮಾತಿಗೆ ಗೋಣು ಹಾಕುತ್ತಿದ್ದವನು ಏಕಾಏಕಿ ನಮ್ಮನ್ನು ಕ್ಯಾರೆ ಅನ್ನದ ಹಾಗೆ ನಿರ್ಲಕ್ಷ್ಯ ಮಾಡಿಬಿಡುತ್ತಾನೆ. ಅಲ್ಲಿ ತಪ್ಪು ಯಾರದು? ಮೊಬೈಲ್ ಫೋನ್‌ನದೋ ಅಥವಾ ಅದನ್ನು ಬಳಸಲ್ಪಡುವ ರೀತಿಯದೋ?

ಹೀಗೆ ಎಲ್ಲವೂ ಕೂಡ. ಪ್ಲಾಸ್ಟಿಕ್ ಬಂದಾಗಿನಿಂದ ಅದು ಸೃಷ್ಟಿಸುತ್ತಿರುವ ಅವಾಂತರಗಳು ಒಂದೆರಡಲ್ಲ. ಪ್ಲಾಸ್ಟಿಕ್ ತಾನಾಗಿಯೇ ಎಲ್ಲೂ ಬಳಸಲ್ಪಡುವುದಿಲ್ಲ ಅಥವಾ ಕಸವಾಗಿ ಬೀಳುವುದಿಲ್ಲ. ಅದನ್ನು ಮಾಡುವವರು ನಾವೇ. ಆದ್ದರಿಂದ ಪ್ರತಿಯೊಂದು ತಂತ್ರಜ್ಞಾನದ ಜೊತೆಗೆ ಅದನ್ನು ಬಳಸುವ ಬಗೆಯನ್ನು, ಅದರ ಜೊತೆ ಬರುವ ಜವಾಬ್ದಾರಿಯನ್ನು ಅರಿಯುವುದು ಮತ್ತು ಪಾಲಿಸುವುದು ಬಹಳ ಮುಖ್ಯವಾಗುತ್ತದೆ. ತಂತ್ರಜ್ಞಾನವನ್ನು ನಮ್ಮ ಸಾಮಾಜಿಕ ಮೌಲ್ಯ ಮತ್ತು ಸನ್ನಿವೇಶದೊಳಗೆ ತರುವುದು ಮತ್ತು ಅಳವಡಿಸಿಕೊಳ್ಳುವುದರಿಂದ ಮಾತ್ರ ನಾವು ಸ್ವಲ್ಪ ನೆಮ್ಮದಿಯನ್ನು ಪಡೆಯಬಹುದೇನೋ. ಇದನ್ನೆಲ್ಲಾ ಕಲಿಸಬೇಕಾದವರು ಬೇರೆ ಯಾರೋ ಎಂದು ನಾವು ಭಾವಿಸಿರುವಂತಿದೆ. ಅದರ ಬದಲು ಯಾವ ಹೊಸ ವಸ್ತು ಬಂದರೂ ಅದರ ಬಳಕೆಯಲ್ಲಿ ಇರಬೇಕಾದ ರೀತಿನೀತಿಯನ್ನು, ಜವಾಬ್ದಾರಿಯನ್ನು ನಾವೇ ಗುರುತಿಸಿಕೊಂಡು ಪಾಲಿಸಿ ಬೇರೆಯವರೂ ಪಾಲಿಸುವಂತೆ ಮಾಡಲು ಪ್ರಯತ್ನಿಸುವದೊಂದೇ ಇರುವ ಮಾರ್ಗ ಅನಿಸುತ್ತದೆ.

ಖಂಡಿತವಾಗಿಯೂ ನಾವು ನಮ್ಮ ಎದುರಿರುವ ವ್ಯಕ್ತಿಯೊಡನೆ ನಮ್ಮ ವ್ಯವಹಾರ ಸೂಕ್ತ ರೀತಿಯಲ್ಲಿ ಮುಕ್ತಾಯವಾದ ನಂತರ ಮೊಬೈಲ್‌ನಲ್ಲಿ ಮಾತನ್ನು ಮುಂದುವರಿಸಬಹುದೇನೋ?

– ಸುಘೋಷ ಕೌಲಗಿ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಟ್ರಸ್ಟಿನ ಬಗ್ಗೆ ಅಭಿಮಾನವಿಟ್ಟಿರುವ ಸ್ನೇಹಿತರು, ಹಳೆಯ ವಿದ್ಯಾರ್ಥಿಗಳು ಟ್ರಸ್ಟಿಗೆ ಆಗಾಗ್ಗೆ ಭೇಟಿ ಕೊಡುತ್ತಾರೆ. ಟ್ರಸ್ಟಿನೊಂದಿಗಿನ ದೀರ್ಘ ಸಂಬಂಧದ ಕುರಿತಾಗಿ ಅಥವಾ ತಾವು ಪಡೆದ ಪ್ರಯೋಜನದ ಬಗ್ಗೆ ಆಗಲಿ ಪ್ರಫುಲ್ಲ ಮನಸ್ಸಿನಿಂದ ಮಾತನಾಡುತ್ತಾರೆ. ಆಗ ನಮಗೆಲ್ಲ ಸಂತೋಷವೆನಿಸುತ್ತದೆ ಮತ್ತು ಆ ದಿನ ಸಾರ್ಥಕವಾಗಿ ಕಳೆಯಿತೆಂಬ ಭಾವನೆ ಮೂಡುತ್ತದೆ. ಹಾಗೆ ಇತ್ತೀಚೆಗೆ ಬಂದು ಹೋದ ಟ್ರಸ್ಟಿನ ಅಭಿಮಾನಿಗಳಲ್ಲಿ ಕರುಣಾಗೃಹದ ಹಿರಿಯ ವಿದ್ಯಾರ್ಥಿ ಶಿವಕುಮಾರನ ತಂದೆ, ತಾಯಿ, ಮತ್ತು ಬಂಧುಬಳಗದವರು. ಶಿವಕುಮಾರ ಟ್ರಸ್ಟಿನ ಕರುಣಾಗೃಹದಲ್ಲಿ ಇದ್ದು ನಂತರ ಎಸ್.ಎಸ್.ಎಲ್.ಸಿ ಮುಗಿಸಿ ಒಳ್ಳೆಯ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡ ಅಲ್ಲದೆ ಅಂಗವಿಕಲರ ಕ್ರೀಡಾ ಕೂಟದಲ್ಲಿ ಭಾಗವಹಿಸುತ್ತ ಒಳ್ಳೆಯ ಹೆಸರನ್ನು ಪಡೆದ. ಕ್ರೀಡಾ ಕಾರ್ಯಕ್ರಮದ ಅಂಗವಾಗಿ ಇಂಗ್ಲೆಂಡಿಗೆ ಹೋಗಿ ಬಂದ. ಇವನ ತಂದೆ ತಾಯಿಗಳು ಟ್ರಸ್ಟಿನ ಬಗ್ಗೆ ತುಂಬ ಅಭಿಮಾನವಿಟ್ಟಿದ್ದಾರೆ.

ಟ್ರಸ್ಟಿಗೆ ಇನ್ನೊಂದು ಅನಿರೀಕ್ಷಿತ ಸ್ನೇಹಿತರ ಭೇಟಿ ಎಸ್.ಚನ್ನಬಸಪ್ಪನವರದು. ಇವರು ೧೯೫೫ ರಿಂದ ೬೩ರ ವರೆಗೆ ಮೇಲುಕೋಟೆಯಲ್ಲಿ ಗ್ರಾಮಸೇವಕರಾಗಿದ್ದರು. ಅವರು ಮೇಲುಕೋಟೆಯಲ್ಲಿ ಇದ್ದ ಸಮಯದಲ್ಲೇ ಟ್ರಸ್ಟಿನ ಸ್ಥಾಪನೆಯಾಯಿತು. ಟ್ರಸ್ಟಿನ ಸದಸ್ಯರಾಗಿದ್ದ ಬಿ.ಆರ್.ಪ್ರಾಣೇಶ್‌ರಾವ್, ಎಸ್.ಪಟ್ಟಾಭಿರಾಮನ್, ಟಿ.ಎಲ್.ಭೈರಶೆಟ್ಟಿ, ಮುಂತಾದವರೆಲ್ಲರ ಹೆಸರು ಅವರಿಗೆ ಚೆನ್ನಾಗಿಗೊತ್ತಿದೆ. ಅಲ್ಲದೆ, ಶ್ರೀ ಕೃಷ್ಣಶಿಶುವಿಹಾರದ ಪ್ರಾರಂಭ, ಕರುಣಾಗೃಹದ ಪ್ರಾರಂಭ ಇವುಗಳನ್ನು ಕೂಡ ನೋಡಿದಂಥವರು. ಆಗಿನ ಶಿಕ್ಷಣ ಮಂತ್ರಿಯಾಗಿದ್ದ ಶ್ರೀ ಎಸ್.ಆರ್.ಕಂಠಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿ ಲೀಲಾವತಿ ಮಾಗಡಿ ಮತ್ತು ಯಶೋಧರಮ್ಮ ದಾಸಪ್ಪನವರ ಭೇಟಿ ಸಹ ಚನ್ನಬಸಪ್ಪನವರ ಜ್ಞಾಪಕದಲ್ಲಿದೆ. ಬಹಳ ವರ್ಷಗಳ ನಂತರ ಟ್ರಸ್ಟಿಗೆ ಭೇಟಿಕೊಟ್ಟು ಟ್ರಸ್ಟಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಮೆಲುಕುಹಾಕಿ ಟ್ರಸ್ಟ್ ಈಗ ತನ್ನ ಜೀವಿತದ ೫೦ನೇ ವರ್ಷದಲ್ಲಿ ಕಾಲಿಡುತ್ತಿರುವ ಬಗ್ಗೆ ಮತ್ತು ಅದು ಸಾಧಿಸುತ್ತಿರುವ ಪ್ರಗತಿ ಬಗ್ಗೆ ತುಂಬ ಸಂತೋಷ ವ್ಯಕ್ತಪಡಿಸಿದರು.

ಆಗಸ್ಟ್ ೮ ರಂದು ಬೆಂಗಳೂರಿನ ಗಾಂಧೀಭವನದಲ್ಲಿ ದಕ್ಷಿಣ ಭಾರತ ಸರ್ವೋದಯ ಕಾರ್ಯಕರ್ತರ ಎರಡುದಿನದ ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿ ಸರ್ವೋದಯ ವಿಚಾರದ ಆಧಾರದ ಮೇಲೆ ಟ್ರಸ್ಟ್ ಕೆಲಸ ಮಾಡುತ್ತಿರುವುದರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

೩೨ನೇ ಪುಟ ನೋಡಿ ...

ಜನಪದ ನಿಲಯದ ಅಂತರಂಗದಲ್ಲಿ .. ೨೦

– *ಸುರೇಂದ್ರ ಕೌಲಗಿ*



ಇದುವರೆಗೆ ಕೇವಲ ಮಿಲ್ಲು ಬಟ್ಟೆಯನ್ನು ಧರಿಸುತ್ತಿದ್ದದ್ದನ್ನು ಬಿಟ್ಟು ಖಾದಿ ಬಟ್ಟೆಗೆ ಮತಾಂತರ ಗೊಂಡದ್ದು ನನ್ನ ಜೀವನದ ವಿಶೇಷ ಸಂಗತಿ. ಬಿಹಾರ್‌ಗೆ ಹೋಗಿ ಜೆ.ಪಿ.ಯವರ ಆಶ್ರಮ ಸೇರುವವರೆಗೂ ಪ್ಯಾಂಟು ಮತ್ತು ಬುಷ್ ಶರ್ಟು ನನ್ನ ಮೈಮೇಲೆ ಇದ್ದವು. ಜೆ.ಪಿ.ಯವರ ಸರ್ವೋದಯ ಆಶ್ರಮವನ್ನು ತಲುಪಿದೆ. ಬಿಹಾರ್ ರಾಜ್ಯದಲ್ಲಿ ಹೆಚ್ಚಾಗಿ ಜನರು ಧೋತಿ ಮತ್ತು ಜುಬ್ಬಾ ಧರಿಸುತ್ತಾರೆ. ಲುಂಗಿ ಧರಿಸುವುದು ಮನೆಯ ಕೆಲಸದಲ್ಲಿದ್ದಾಗ ಅಥವಾ ಹೊಲದ ಕೆಲಸದಲಲ್ಲಿ ಇದ್ದಾಗ ಮಾತ್ರ. ಆದರೆ ಅವರ ಬಟ್ಟೆಯೂ ಸಹ ಮಿಲ್ಲು ಬಟ್ಟೆಯೇ ಆಗಿರುತ್ತದೆ. ಆದರೆ ಜೆ.ಪಿ.ಯವರ ಆಶ್ರಮದಲ್ಲಿ ಇದ್ದವರೆಲ್ಲಾ ಖಾದಿ ಧಾರಿಗಳೇ ಆಗಿದ್ದರು. ಜಯಪ್ರಕಾಶರು ಮತ್ತು ಅವರ ಪತ್ನಿ ಪ್ರಭಾವತಿ ಪೂರ್ಣವಾಗಿ ಖಾದಿ ಧಾರಿಗಳಾಗಿದ್ದರು. ಮುಂಬೈಯಲ್ಲಿ ಜೆ.ಪಿ.ಯವರನ್ನು ಡಾ.ದಿನಷಾ ಮೆಹತಾರವರ ಪ್ರಾಕೃತಿಕ ಚಿಕಿತ್ಸಾಕೇಂದ್ರದಲ್ಲಿ ಮೊದಲಬಾರಿಗೆ ನೋಡಿದ್ದಾಗ ಅವರು ತುಂಬಾ ಶುಭ್ರವಾದ ಖಾದಿ ಜುಬ್ಬಾ ಮತ್ತು ಧೋತಿಯನ್ನು ತೊಟ್ಟುಕೊಂಡಿದ್ದರು. ತುಂಬಾ ಮನಮೋಹಕವಾಗಿ ಕಾಣುತ್ತಿದ್ದರು. ಬಿಳಿ ಖಾದಿ ಬಟ್ಟೆಯಲ್ಲಿ ಅವರ ವ್ಯಕ್ತಿತ್ವ ಪೂರ್ಣ ಅರಳಿನಿಂತಂತೆ ಭಾಸವಾಗುತ್ತಿತ್ತು. ಮೊದಲ ದೃಷ್ಟಿಯಲ್ಲಿಯೇ ನನಗೆ ಖಾದಿ ಬಗ್ಗೆ ಪ್ರೇಮ ಹುಟ್ಟಿಸಿತು. ಆದ್ದರಿಂದ ನಾನು ಆಶ್ರಮ ತಲುಪುತ್ತಲೇ ಖಾದಿ ಬಟ್ಟೆಯನ್ನು ಧರಿಸಲು ಪ್ರಾರಂಭಿಸಿದೆ. ಆಶ್ರಮಕ್ಕೆ ಪ್ರವೇಶಿಸಿದ ಮೊದಲ ದಿನ ನನಗೆ ಪರಿಚಯವಾದದ್ದು ತ್ರಿಪುರಾರಿ ಶರಣ್ ಸಿಂಗ್ ಎಂಬ ಉತ್ಸಾಹಿ ಸರ್ವೋದಯ ಕಾರ್ಯಕರ್ತ. ಅವರ ವಯಸ್ಸು ಸುಮಾರು ೨೬. ಅವರು ಬಿಹಾರ್ ರಾಜ್ಯದವರು. ಸಮಾಜವಾದದ ಬಗ್ಗೆ ಒಲವು ಇತ್ತು. ಇವರು ನನ್ನನ್ನು ನಾನು ಆಶ್ರಮ ಸೇರಿದಾಗಿನಿಂದ ತನ್ನ ತಮ್ಮನಂತೆ ನೋಡಿಕೊಳ್ಳುತ್ತಿದ್ದರು. ನನಗೆ ಬಿಹಾರ್ ರಾಜ್ಯದ ಸಾಮಾಜಿಕ ರೀತಿ ನೀತಿಗಳನ್ನು ಮತ್ತು ಆ ರಾಜ್ಯದ ಮುಖ್ಯ ವ್ಯಕ್ತಿಗಳ ಪರಿಚಯವನ್ನು ಮಾಡಿಕೊಡುತ್ತಿದ್ದರು. ನನ್ನ ಆರೋಗ್ಯದ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು. ಇವರೇ ಆಶ್ರಮದ ಖಾದಿ ಭಂಡಾರದಿಂದ ನನಗೆ ಅಗತ್ಯವಾದ ಖಾದಿ ಬಟ್ಟೆಯನ್ನು ಕೊಂಡು ಧೋತಿಯನ್ನು ಧರಿಸುವುದನ್ನು ಹೇಳಿಕೊಟ್ಟರು. ಮೊದಲ ದಿನ ನನ್ನ ಹಳೆ ಮಿಲ್ಲು ಬಟ್ಟೆಯನ್ನು ಕಳಚಿ ಹೊಸ ಬಿಳಿ ಖಾದಿ ಬಟ್ಟೆಯನ್ನು ಧರಿಸಿದಾಗ ನನಗೆ ಒಂದು ರೀತಿಯ ರೋಮಾಂಚನವಾಯಿತು. ಒಂದು ಹೊಸ ಜೀವನ ಪ್ರಾರಂಭಿಸುತ್ತಿದ್ದೇನೆಂಬ ಅನಿಸಿಕೆ ಮನಸ್ಸಿನಲ್ಲಿ ಮೂಡಿತು. ಜೆ.ಪಿ.ಖಾದಿಧಾರಿಗಳು. ಅವರ ಆಪ್ತಸಹಾಯಕನಾದ ನಾನೂ ಖಾದಿಧಾರಿಯಾದೆ. ಈ ಖಾದಿ ಬಟ್ಟೆ ಜೆ.ಪಿ. ಮತ್ತು ನನ್ನ ಮಧ್ಯ ಒಂದು ರೀತಿಯ ಬಾಂಧವ್ಯವನ್ನು ಉಂಟುಮಾಡಿತು. ಜೆ.ಪಿ.ಯವರ ಕಾರ್ಯಕ್ಷೇತ್ರದ ಮತ್ತು ವಿಚಾರದ ದೀಕ್ಷೆಯನ್ನು ನಾನು ಪಡೆದಿರುವಂಥ ಅನುಭವವಾಯಿತು. ಇದು ೧೯೬೯ರಲ್ಲಿ. ಅಂದರೆ ೫೦ವರ್ಷಗಳ ಹಿಂದೆ. ಅಂದಿನಿಂದ ನಾನು ನಿರಂತರವಾಗಿ ಪ್ರೀತಿಯಿಂದ, ಸಂತೋಷದಿಂದ ಮತ್ತು ಅಭಿಮಾನದಿಂದ ಹಾಗೂ ವಿಚಾರದಿಂದ ಖಾದಿಧಾರಿಯಾಗಿದ್ದೇನೆ. ಯಾವ ಸಂದರ್ಭದಲ್ಲೂ ಖಾದಿಬಟ್ಟೆಯನ್ನು ಬಿಟ್ಟಿಲ್ಲ. ಈಗಲೂ ಖಾದಿಧೋತಿಯನ್ನು ತೊಟ್ಟು ಜುಬ್ಬಾ ಧರಿಸುವಾಗಲೆಲ್ಲ ಬಿಹಾರದ ಆ ನನ್ನ ಸಹೋದರ ತ್ರಿಪುರಾರಿ ಶರಣ್ ಮತ್ತು ನನ್ನ ಜೀವನದ

ಧ್ರುವತಾರೆ ಜಯಪ್ರಕಾಶ ನಾರಾಯಣ ನೆನಪಾಗದೆ ಇರುವುದಿಲ್ಲ. ಕಾಲ ಕ್ರಮೇಣ ಧರಿಸಿದ ಬಿಳಿ ಖಾದಿ ಬಟ್ಟೆಯನ್ನು ಒಗೆಯುವುದು ಅದಕ್ಕೆ ನೀಲಿ ಅಥವಾ ಟಿನೋಪಾಲ್ ಹಾಕಿ ಇನ್ನೂ ಪ್ರಕಾಶಮಾನವಾಗಿ ಮಾಡುವುದು ಹಾಗೂ ಒಗೆದಾದ ಮೇಲೆ ತುಂಬ ಅಚ್ಚುಕಟ್ಟಾಗಿ ಅಂದರೆ ಯಾವ ಸುಕ್ಕೂ ಇಲ್ಲದಂತೆ ಒಣಹಾಕುವುದು, ಬಟ್ಟೆ ಒಣಗಿದ ಮೇಲೆ ಕೈಯಿಂದಲೇ ಬಟ್ಟೆಯನ್ನು ತೀಡಿ ತಿದ್ದಿ ಮಡಚಿಬಿಡುವುದು ಇತ್ಯಾದಿ ಎಲ್ಲ ಕ್ರಿಯೆಗಳೂ ಕರಗತವಾದವು. ಮುಂದೆ ಒಂದು ವರ್ಷದ ನಂತರ ದೀಪಾವಳಿ ಹಬ್ಬಕ್ಕೆಂದು ಮುಂಬೈಯಲ್ಲಿದ್ದ ನನ್ನ ಅಣ್ಣನ ಮನೆಗೆ ಖಾದಿ ಬಟ್ಟೆಯನ್ನು ಧರಿಸಿಹೋದಾಗ ನನ್ನನ್ನು ಸ್ಟೇಷನ್‌ನಲ್ಲಿ ಭೇಟಿಮಾಡಿ ಮನೆಗೆ ಕರೆದುಕೊಂಡು ಹೋಗಲು ಬಂದಿದ್ದ ಅಣ್ಣ ಅತ್ತಿಗೆ ಗುರುತುಸಿಗದೆ ಸ್ವಲ್ಪಹೊತ್ತು ತಬ್ಬಿಬ್ಬಾಗಿದ್ದರು. ನಂತರ ನನ್ನ ಈ ಹೊಸ ಉಡುಪಿನಲ್ಲಿ ನೋಡಿ ಅವರು ಸಂತೋಷಪಟ್ಟರು. ಮುಂದೆ ಆಶ್ರಮದಲ್ಲಿ ಕೈರಾಟೆ ಮೇಲೆ ನೂಲುವುದನ್ನು ಕಲಿತೆ. ಎಷ್ಟೋ ವರ್ಷ ಚರಕಾ ನನ್ನ ಜೀವನ ಸಂಗಾತಿಯಾಗಿತ್ತು.

(ಮುಂದುವರೆಯುವುದು...)

* * *

೩೦ನೇ ಪುಟದಿಂದ ...

ಟ್ರಸ್ಟಿಗೆ ಭೇಟಿಕೊಟ್ಟ ಇನ್ನೋರ್ವ ಹಳೆಯ ಪರಿಚಿತರಲ್ಲಿ ದಿವಂಗತ ಎಸ್.ತಿಮ್ಮಯ್ಯನವರ ಮಗ, ಸೊಸೆ ಮತ್ತು ಮೊಮ್ಮಗಳು. ತಿಮ್ಮಯ್ಯನವರು ಟ್ರಸ್ಟ್ ಪ್ರಾರಂಭವಾದಗಲಿಂದಲೂ ತಮ್ಮ ಜೀವನದ ಕೊನೆಯ ದಿನದ ವರೆಗೂ ಟ್ರಸ್ಟಿನ ಸಂಬಂಧವಿರಿಸಿಕೊಂಡಿದ್ದರು. ಅನೇಕ ರೀತಿ ಸಹಾಯ ಮಾಡಿದವರಾಗಿದ್ದರು.

ಬೆಂಗಳೂರಿನ 'ಸಂವಾದ' ಎಂಬ ಸಂಸ್ಥೆಯ ಟ್ರಸ್ಟಿನ ಹೊಸ ಜೀವನದಾರಿ ಕೇಂದ್ರದಲ್ಲಿ 'ಮಳೆ ಕೂಯಿಲಿನ' ಪ್ರಾತ್ಯಕ್ಷತೆ ಶಿಬಿರ ನಡೆಸಿತು. ಮೂರು ದಿನಗಳ ಕಾಲ ನಡೆದ ಈ ಶಿಬಿರದಲ್ಲಿ ೩೦ ಯುವಕರು ಭಾಗವಹಿಸಿದ್ದರು. ಶಿಬಿರದ ಮಾರ್ಗದರ್ಶನವನ್ನು ಉ.ನ.ರವಿಕುಮಾರ್ ನಿರ್ವಹಿಸಿದರು. ಶಿಬಿರದ ಕೊನೆಯ ದಿನ ಮಳೆ ಬಂದದ್ದರಿಂದ ಶಿಬಿರಾರ್ಥಿಗಳು ಮಾಡಿದ ಕೆಲಸವನ್ನು ಪ್ರತ್ಯಕ್ಷವಾಗಿ ನೋಡಿದ ಸಂತೋಷ ಅವರಿಗಾಯಿತು.

೬೩ನೇ ಸ್ವಾತಂತ್ರ್ಯ ಸಂಭ್ರಮದಲ್ಲಿ ಭಾಗವಹಿಸಲು ಟ್ರಸ್ಟಿನ ಅಧ್ಯಕ್ಷರು ಅಮೃತಿಯೆಂಬ ಗ್ರಾಮಕ್ಕೂ ಮತ್ತು ಆದಿಚುಂಚನಗಿರಿ ವಿದ್ಯಾ ಸಂಸ್ಥೆಗೂ ಮತ್ತು ಮೈಸೂರಿನ ಒಂದು ಸೇವಾ ಸಂಸ್ಥೆ ಕಾರ್ಯಕ್ರಮಕ್ಕೂ ಹೋಗಿದ್ದರು.

ಮಹಿಳಾ ಮತ್ತು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀಮತಿ ವಿಮಲಾರವರು ಟ್ರಸ್ಟಿಗೆ ಭೇಟಿಕೊಟ್ಟು ಕರುಣಾಗೃಹದ ವೀಕ್ಷಣೆ ಮಾಡಿದರು.

<u>೨೦೦೯ ಆಗಸ್ಟ್ ಮಾಹೆಯ ದಾನಿಗಳು</u>

ಶ್ರೀ ಸಿ.ಎಸ್. ಬನಶಂಕರಯ್ಯ, ಶ್ರೀ ಎಂ.ವಿ.ದೇಶಪಾಂಡೆ - ಬೆಂಗಳೂರು
ಶ್ರೀ ಎನ್.ಕೆ.ಕೌಲಗಿ - ಮುಂಬೈ; ಡಾ.ರಾಧಾಕೃಷ್ಣ - ತಿಪಟೂರು
ಶ್ರೀ ಕೆ.ಸಿ.ಕೃಷ್ಣಸ್ವಾಮಿ - ಮೇಲುಕೋಟೆ ಮತ್ತು
ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ.ಎನ್.ಎಸ್.ಸುಬ್ಬರಾವ್ – ಶೃಂಗೇರಿ
ಶ್ರೀ.ಜಿ.ಎನ್.ಕೃಷ್ಣಶಾಸ್ತ್ರಿ – ಮೈಸೂರು
ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,
ಡಾ.ರಾಜೇಂದ್ರ – ಪ್ರಾಂಶುಪಾಲರು, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
ಶ್ರೀ ಎಂ.ಪುಟ್ಟೇಗೌಡ – ಸಬ್ಬನಹಳ್ಳಿ
ಶ್ರೀ ಚಿಕ್ಕಬಸಪ್ಪ – ಹಾಸನ,
ಡಾ.ಬಂಜಗೆರೆ ಜಯಪ್ರಕಾಶ್ – ಹಾರೋಹಳ್ಳಿ
ಶ್ರೀ ಚೌಡಪ್ಪ – ಕುಣಿಗಲ್
ಡಾ.ಹೆಚ್.ಎಸ್.ಮುದ್ದೇಗೌಡ – ಮಂಡ್ಯ
ಶ್ರೀ ಪ್ರಸನ್ನ – ಹೆಗ್ಗೋಡು ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net